ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಫೆಬ್ರವರಿ-೨೦೦೯ ಸಂಚಿಕೆ-೭



ಇಂದಿನ ನಮ್ಮ ಆದ್ಯತೆ
ಹಿಂಸೆಯೊ, ಅಹಿಂಸೆಯೊ?

ಜನಪದ ವಿಚಾರದಲ್ಲಿ

ಫೆಬ್ರವರಿ –೨೦೦೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ – ೨೦೦೯
ಸಂಪುಟ – ೯
ಸಂಚಿಕೆ – ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–571431, ಜಿಲ್ಲಾ ಮಂಡ್ಯ

✆ 08236 316344
janapada@yahoo.com
www.janapada.net

ಮುಖಾಮುಖಿ

ಬಾ...
ಕುಳಿತುಕೋ, ಮಾತನಾಡು
ಮುಖಾಮುಖಿಯಾಗಲೆಂದೇ ಕಾದಿದ್ದೇನೆ
ಇರಬಹುದು ನಿನ್ನೆದೆಯಲ್ಲಿ
ನನ್ನ ದೋಷಗಳ ಪಟ್ಟಿ
ತೆರೆದಿಡು
ನಾನೇನೂ ದೇವತೆಯಲ್ಲ
ಅಸಾಧಾರಣ ನಾರಿಯೂ ಅಲ್ಲ
ತಪ್ಪು ಒಪ್ಪುಗಳ ಸಹಜ ಸ್ತ್ರೀ
ನೀನೂ ದೇವದೂತನಲ್ಲ
ಸಹಜ ಕಾಮನೆಗಳ ಜೀವ
ಉಪ್ಪುಂಡ ದೇಹ
ದೋಷಯುಕ್ತರು ನಾವು ಹುಲುಮಾನವರು
ಒಪ್ಪಿಕೊಳ್ಳೋಣ
ಏಳೇಳು ಜನ್ಮಗಳ ಪ್ರೇಮಿಗಳಲ್ಲ ನಾವು
ನಿನ್ನೆ ಮೊನ್ನೆ ಚಿಗುರಿದಷ್ಟೇ
ತೊಟ್ಟ ಭ್ರಮೆಗಳನ್ನೆಲ್ಲ ಕಳಚಿಕೊಳ್ಳೋಣ
ಸಪ್ತಪದಿಯಂತೆ ನೀನಿಟ್ಟ ಹೆಜ್ಜೆಯಲ್ಲೇ
ಹೆಜ್ಜೆ ಇಟ್ಟರೂ ಈ ಬದುಕು ಮುಗಿಯಬಹುದು
ಆದರೂ ನನ್ನ ಹೆಜ್ಜೆಯ
ಆಕಾರ ಅಸ್ತಿತ್ವ ಆಳ ಅಗಲ
ಗುರುತಿಸುವ ಬಯಕೆ ನನಗೆ
ಬಾ...
ಕೈ ಹಿಡಿದು ಜೊತೆಜೊತೆಯೇ
ಹೆಜ್ಜೆ ಹಾಕೋಣ
ಮುಖಾಮುಖಿಯಾಗೋಣ
ಭ್ರಮೆಗಳ ಕಳಚಿಕೊಳ್ಳೋಣ
ಸಾಧ್ಯವಾದರೆ ಆಗಲೂ ಪ್ರೀತಿಸೋಣ

– *ಶಾಂತಕುಮಾರಿ*

ವಿಚಾರ ದೀಪ್ತಿ

ಸಮಗ್ರ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ

ಕ್ರಿ.ಶ.೬೫೦ರ ಹಂತದ ವರೆಗಿನ ತಮಿಳಿಗೆ ಮಾತ್ರ ಶಾಸ್ತ್ರೀಯ ಸ್ಥಾನ ನೀಡಲಾಗಿದೆ. ಇದೇ ತಪ್ಪು ಕನ್ನಡದ ಸಂದರ್ಭದಲ್ಲಿ ಮರುಕಳಿಸುವಂತೆ ಆಗಬಾರದು. ಬೆಳವಣಿಗೆಯಲ್ಲಿ ಕನ್ನಡ ಭಾಷೆಯು ನಿರಂತರತೆಯನ್ನು ಕಾಯ್ದುಕೊಂಡಿದೆ. ಅದನ್ನು ಗಮನಿಸಿ ಕ್ರಿಸ್ತ ಪೂರ್ವದಿಂದ ಇವತ್ತಿನವರೆಗಿನ ಕನ್ನಡವನ್ನು ಇಡಿಯಾಗಿ ಕ್ಲಾಸಿಕಲ್ ಎಂದು ನಿರ್ಧರಿಸಲು ಮಾನವ ಸಂಪನ್ಮೂಲ ಇಲಾಖೆ ರಚಿಸಿರುವ ಸಮಿತಿಯ ಮೇಲೆ ಒತ್ತಡ ತರಬೇಕು.

ಕ್ಲಾಸಿಕಲ್ ಸ್ಥಾನದ ಫಲವಾಗಿ ಕನ್ನಡಕ್ಕೆ ಕೋಟ್ಯಂತರ ಹಣ ಸಿಗುತ್ತದೆ. ಅದರಿಂದ ಏನು ಮಾಡುತ್ತೇವೆ ಎಂಬುದೇ ಮುಖ್ಯ. ತಮಿಳುನಾಡಿಗೆ ನೀಡಲಾಗಿರುವ ಹಣದಲ್ಲಿ ಶೇ ೩೦ರಷ್ಟನ್ನೂ ಖರ್ಚುಮಾಡಲು ಅಲ್ಲಿ ಸಾಧ್ಯವಾಗಿಲ್ಲ. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರವೂ ರಾಜ್ಯದ ಎಲ್ಲ ವಿ.ವಿ.ಗಳಿಗೆ ತಲಾ ೩ ಕೋಟಿ ಕೊಟ್ಟಿದೆ. ಅದನ್ನು ಏನು ಮಾಡಬೇಕು ಎಂಬುದೇ ಈಗ ದೊಡ್ಡ ಪ್ರಶ್ನೆ.

ಕ್ಲಾಸಿಕಲ್ ಸ್ಥಾನದ ಹಿನ್ನೆಲೆಯಲ್ಲಿ ಸಮರ್ಪಕ ಕಾರ್ಯಯೋಜನೆಯೇ ನಮ್ಮಲ್ಲಿಲ್ಲ. ಸಿದ್ಧವಿರುವ ಮಾನವ ಸಂಪನ್ಮೂಲವೂ ಇಲ್ಲ. ಇವೆರಡರ ಕೊರತೆಯನ್ನು ಮೊದಲು ನೀಗಿಸಬೇಕು. ಇಲ್ಲದಿದ್ದರೆ ಕ್ಲಾಸಿಕಲ್ ಸ್ಥಾನ ಎಂಬುದು ಪುನರ್ವಸತಿ ಕೇಂದ್ರವಾಗಿ ಬಿಡುವ ಅಪಾಯವಿದೆ. ಅದಕ್ಕಾಗಿ ೬೦ ದಾಟಿದವರಿಗಿಂತ ೩೦ರ ಆಸುಪಾಸಿನವರು ನಮ್ಮದಿದು ಕನ್ನಡ ಎಂದು ಮುಂದೆ ಬರಬೇಕು.

ಕನ್ನಡದ ಒಂದು ನಿರ್ದಿಷ್ಟ ಪ್ರಭೇದಕ್ಕೆ ಶಾಸ್ತ್ರೀಯ ಸ್ಥಾನ ಕೊಟ್ಟಿಲ್ಲ. ಚಾರಿತ್ರಿಕ, ಪ್ರಾದೇಶಿಕ, ಆದಿವಾಸಿ ಮೊದಲಾದ ಹಲವು ಪ್ರಭೇದಗಳು ಕನ್ನಡದಲ್ಲಿವೆ. ಯಾವುದೇ ಒಂದು ಪ್ರಭೇದವನ್ನು ಕ್ಲಾಸಿಕಲ್ ಎಂದು ಕೇಂದ್ರ ಕರೆದಿಲ್ಲ. ಜನ ಬಳಸುವ ಕನ್ನಡಕ್ಕೂ ಕ್ಲಾಸಿಕಲ್ ಕನ್ನಡಕ್ಕೂ ಸಂಬಂಧವೇ ಇಲ್ಲ ಎನ್ನುವಂತಾಗಬಾರದು. ಇಲ್ಲಿವರೆಗಿನ ಕನ್ನಡವನ್ನು ಶಾಸ್ತ್ರೀಯ ಎಂದು ಕರೆಯ ಬೇಕು. ಮೊದಲು ಇದ್ದದ್ದು ಉಪಭಾಷೆಗಳು. ಅವುಗಳಿಂದಲೇ ಭಾಷೆ ರೂಪು ತಳೆಯುತ್ತದೆ ಎಂಬ ಆಲೋಚನಾ ಕ್ರಮದಿಂದ ಕ್ಲಾಸಿಕಲ್ ಸ್ಥಾನವನ್ನು ನೋಡಬೇಕು. ವಿದ್ವಾಂಸರು ಉಪಭಾಷೆಗಳನ್ನು ನಿರ್ಲಕ್ಷಿಸಿದ್ದಾರೆ. ಅವುಗಳನ್ನು ಪ್ರಧಾನಧಾರೆಗೆ ತರಬೇಕಾಗಿದೆ.

ಶಿಕ್ಷಣ ನೀತಿ ಬದಲಿಸಿ. ಆ ಭಾಷಾ ನೀತಿಯು ಇತರ ವಲಯದ ನೀತಿಗಳಿಗೆ ವಿರುದ್ಧವಾಗಿರಬಾರದು. ಈಗ ಶಿಕ್ಷಣ ನೀತಿ ಮತ್ತು ಭಾಷಾ ನೀತಿಗಳ ನಡುವೆ ವಿರೋಧವಿದೆ. ಹೀಗಾಗಿಯೇ ಕನ್ನಡ ಭಾಷೆಯ ವಿರುದ್ಧ ಹೈಕೋರ್ಟ್ ತೀರ್ಪು ನೀಡಲು ಸಾಧ್ಯವಾಯಿತು. ಅನುದಾನ ರಹಿತ ಶಾಲೆಗಳು ಎಂಬ ಪರಿಕಲ್ಪನೆಯನ್ನು ಶಿಕ್ಷಣ ನೀತಿಯಿಂದ ಹೊರಗಿಡಬೇಕು. ಎಲ್ಲಾ ಖಾಸಗಿ ಶಾಲೆಗಳಿಗೂ ಅನುದಾನ ನೀಡಬೇಕು. ಆಗ ಮಾತ್ರ ಭಾಷಾ ನೀತಿಯನ್ನು ಹೇರಲು ಸಾಧ್ಯ.

– ಕೆ.ವಿ. ನಾರಾಯಣ

ಇಂದಿನ ನಮ್ಮ ಆದ್ಯತೆ ಹಿಂಸೆಯೊ, ಅಹಿಂಸೆಯೊ?

– *ಸುರೇಂದ್ರ ಕೌಲಗಿ*

ಇಂದು ಜಗತ್ತಿನಾದ್ಯಂತ ಹಿಂಸೆಯ ಅಟ್ಟಹಾಸ ನಡೆಯುತ್ತಿದೆ. ಜನತೆ ಮಾತ್ರ ಕುಂಭಕರ್ಣ ನಿದ್ರೆ ಮಾಡುತ್ತಿದೆ! ಸುತ್ತಮುತ್ತ ನಡೆಯುತ್ತಿರುವ ಹಿಂಸೆಯ ಘಟನೆಗಳಿಗೂ, ತನಗೂ ಯಾವ ಸಂಬಂಧವೂ ಇಲ್ಲದವರಂತೆ ಜನರು ವರ್ತಿಸುತ್ತಿದ್ದಾರೆ. ಈಗ ಎಲ್ಲೆಡೆ ನಡೆಯುತ್ತಿರುವ ಹಿಂಸೆ ನರಮೇಧವೇ ಆಗಿದೆ. ಈ ನರಮೇಧವನ್ನು ನಿಲ್ಲಿಸುವ ಹೊಣೆ ಸರ್ಕಾರದ್ದು, ಈ ವಿಷಯದಲ್ಲಿ ತನ್ನದೇನೂ ಪಾತ್ರವಿಲ್ಲ ಎಂಬ ಮನೋನೀತಿ ಜನತೆಯದಾಗಿದೆ; ಜನತೆ ತಟಸ್ಥವಾಗಿದ್ದುಕೊಂಡು ನರಮೇಧವನ್ನು ನೋಡುತ್ತಿದೆ. ಇಂಥ ನಿಷ್ಕ್ರಿಯ, ನಪುಂಸಕ ಸಮಾಜ ಈ ಮೊದಲು ಇದ್ದಿರಲಾರದು. ಬ್ರಹನ್ನಳೆಯ ಪಾತ್ರದಲ್ಲಿರುವ ಪ್ರಜೆಗಳನ್ನು ಹೊಂದಿರುವ ಸರ್ಕಾರಗಳು ಕೂಡ ಹಿಂಸೆಯನ್ನು ತಡೆಯುವಲ್ಲಿ ನಿಃಸಹಾಯಕವಾಗಿವೆ. ಹಿಂಸೆಯನ್ನು ತಡೆಗಟ್ಟುವ ಕಿಂಚಿತ್ ಪ್ರಯತ್ನವನ್ನು ಜನತೆ ಮಾಡಿದಲ್ಲಿ ಸರ್ಕಾರ ಕೂಡ ಬಹುವಾಗಿ ಆ ನಿಟ್ಟಿನತ್ತ, ಕಾರ್ಯಪ್ರವತ್ತವಾಗಬಹುದು. ಜನತೆಯ ಸಹಕಾರವಿಲ್ಲದೆ ಸರ್ಕಾರಗಳು ಶಸ್ತ್ರಾಸ್ತ್ರಗಳ ಬಲ ಎಷ್ಟೇ ಇದ್ದಾಗ್ಯೂ, ಸೈನಿಕ ಬಲ ಎಷ್ಟೇ ಇದ್ದಾಗ್ಯೂ ಹಿಂಸೆಯನ್ನು ತಡೆಗಟ್ಟಲಾರವು. ಹಿಂಸೆಯನ್ನು ತಡೆಗಟ್ಟುವಲ್ಲಿ ಜನತೆಯ ಸಹಕಾರವಿಲ್ಲದಿದ್ದಾಗ ಸರ್ಕಾರದ ಕಾರ್ಯಾಚರಣೆ ದಮನ ನೀತಿಯದಾಗುತ್ತದೆ. ಸರ್ಕಾರವೇ ಜನತೆಯ ನರಮೇಧಕ್ಕೆ ನಿಲ್ಲುವಂತಾಗುತ್ತದೆ. ಜಗತ್ತಿನ ಎಲ್ಲ ದೇಶಗಳ ಇತಿಹಾಸ ಪುಟಗಳು ರಕ್ತಸಿಕ್ತವಾಗಿವೆ. ವಿಯೆಟ್ನಾಂನಲ್ಲಿ, ಲಂಕೆಯಲ್ಲಿ, ಅಫಘಾನಿಸ್ತಾನದಲ್ಲಿ, ಇರಾಕ್‌ನಲ್ಲಿ, ಪಾಲೆಸ್ಟೈನಿನಲ್ಲಿ ನಡೆದ ಆಂತರಿಕ ಯುದ್ಧಗಳು ನರಮೇಧದ ಇತ್ತಿಚಿಗಿನ ಉದಾಹರಣೆಗಳು. ಇವುಗಳಲ್ಲದೆ ಭಾರತ ಹಾಗು ಇತರೆಡೆಗಳಲ್ಲಿ ಸಂಭವಿಸುತ್ತಿರುವ ಭಯೋತ್ಪಾದಕರ ನರಹತ್ಯೆಗಳಿಗಂತೂ ಕೊನೆ ಮೊದಲಿಲ್ಲ. ದಿನಕಳೆದಂತೆ ಹಿಂಸಾಚಾರವೇ ಒಂದು ವೃತ್ತಿಯಾಗಿ ಮೈದಳೆಯುತ್ತಿದೆ. ಜಗತ್ತಿನ ಎಲ್ಲ ದೇಶಗಳ ಎಲ್ಲ ಸರ್ಕಾರಗಳು ಹಿಂಸೆಯನ್ನು ತಡೆಗಟ್ಟಲು ವಿಫಲವಾಗಿವೆ. ಜಾಗತಿಕ ಮಟ್ಟದಲ್ಲಿ ಶಾಂತಿಯನ್ನು ಸ್ಥಾಪಿಸುವ ಉದ್ದೇಶ್ಯ ಹೊಂದಿರುವ ವಿಶ್ವರಾಷ್ಟ್ರ ಸಂಸ್ಥೆಯೂ ದೇಶಗಳ ಮಧ್ಯದಲ್ಲಿಯ ಹೋರಾಟವನ್ನು ತಡೆಗಟ್ಟಲು ವಿಫಲವಾಗಿದೆ. ಜಗತ್ತಿನ ದೊಡ್ಡ ರಾಷ್ಟ್ರಗಳು ಹೊಂದಿರುವ ವಿಟೋ ಅಧಿಕಾರ

ವಿಶ್ವರಾಷ್ಟ್ರ ಸಂಸ್ಥೆಯನ್ನೇ ಅಂಗವಿಕಲ ಸಂಸ್ಥೆಯನ್ನಾಗಿ ಮಾಡಿದೆ. ಬಲಿಷ್ಠ ರಾಷ್ಟ್ರಗಳು ಹೊಂದಿರುವ ವಿಟೋ ಅಧಿಕಾರದ ಬಲೆಯಿಂದ ಹೊರಬರಲು ವಿಶ್ವರಾಷ್ಟ್ರ ಸಂಸ್ಥೆಗೆ ಸಾಧ್ಯವಿಲ್ಲವಾಗಿದೆ. ಆದ್ದರಿಂದ ಜಗತ್ತಿನ ಬಲಾಢ್ಯ ರಾಷ್ಟ್ರಗಳು ಹಿಂಸೆಯಲ್ಲಿ ತೊಡಗಿದಾಗ, ನರಮೇಧದಲ್ಲಿ ತೊಡಗಿದಾಗ ಜಗತ್ತಿನ ಉಳಿದ ರಾಷ್ಟ್ರಗಳು ಮೂಕ ಪ್ರೇಕ್ಷಕವಾಗಿರುವಂತಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಹಿಂಸಾಚಾರಕ್ಕೆ ಜಗತ್ತಿನಾದ್ಯಂತ ಅಟ್ಟಹಾಸ ಮೆರೆಯಲಿಕ್ಕೆ ಯಾವ ಅಡೆತಡೆಯೂ ಇಲ್ಲವಾಗುತ್ತದೆ. ಸ್ವಚ್ಛಂದವಾಗಿ ಹಿಂಸೆ ತಾಂಡವವಾಡುತ್ತದೆ. ಹಿಂಸೆಯ ಪ್ರತಾಪ ಮತ್ತು ಪ್ರಭಾವ ಎಷ್ಟಾಗಿದೆಯೆಂದರೆ ಹಿಂಸೆ ಜೀವನದ ಅವಿಭಾಜ್ಯ ಅಂಗವಾಗಿದೆ; ಜೀವನದ ಮೌಲ್ಯವಾಗಿದೆ; ಜೀವನದ ವಿಧಾನವಾಗಿದೆ. ಕುಟುಂಬದಲ್ಲಿ ಕಲಹವುಂಟಾದರೆ, ವ್ಯವಹಾರದಲ್ಲಿ ಮತಭೇದವುಂಟಾದರೆ ಮನುಷ್ಯ ಈ ಸಮಸ್ಯೆಗಳ ಪರಿಹಾರಕ್ಕೆ ಹಿಂಸೆಯನ್ನೇ ಆಶ್ರಯಿಸುತ್ತಾನೆ. ಬಹು ಚಿಲ್ಲರೆ ಕಾರಣಕ್ಕಾಗಿ ಮನುಷ್ಯ ಬಹು ಸುಲಭವಾಗಿ ಹಿಂಸೆಗೆ ತೊಡಗುತ್ತಾನೆ. ಒಂದು ರೀತಿಯಲ್ಲಿ ಹಿಂಸೆಯ ಕೌಟುಂಬೀಕರಣವಾಗಿದೆ, ಗ್ರಾಮೀಕರಣವಾಗಿದೆ, ರಾಷ್ಟ್ರೀಕರಣವಾಗಿದೆ ಮತ್ತು ಜಗತೀಕರಣವಾಗಿದೆ. ಈ ಎಲ್ಲ ಬಗೆಯ 'ಕರಣ'ಕ್ಕೆ ಆಧುನಿಕ ತಾಂತ್ರಿಕ ಸಂಶೋಧನೆಗಳು ಬಹಳ ಮಟ್ಟಿಗೆ ನೆರವಾಗಿವೆ, ಪ್ರೇರಣೆ ಕೊಟ್ಟಿವೆ ಮತ್ತು ಪ್ರೋತ್ಸಾಹಿಸಿವೆ. ಹಿಂಸೆಯ ಮೂಲವಾದ ಮನಸ್ಸನ್ನು ಹಿಂಸೆಯಲ್ಲಿ ತೊಡಗಿಸುವಂತೆ ಮಾಡಲು ಮನೆ-ಮನೆಯಲ್ಲಿ ದೂರದರ್ಶನಗಳು ಬಂದಿವೆ, ಜೇಬು-ಜೇಬುಗಳಲ್ಲಿ ಮೊಬೈಲ್‌ಗಳು ಕೂತಿವೆ. ಇವುಗಳ ಮೂಲಕ ಮನದಲ್ಲಿ ಮನೆಮಾಡಿರುವ ಹಿಂಸೆ ಕಾರ್ಯಗತಗೊಳ್ಳಲು ಸುಲಭ ಸಾಧನಗಳಾದ ಪಿಸ್ತೂಲುಗಳು, ಎ.ಕೆ-೪೭ ರೈಫಲ್‌ಗಳು, ಚೂರಿಗಳು ಬಂದಿವೆ. ಈ ರೀತಿ ಹಿಂಸೆ ಸಹಜವಾಗಿ ಹುಟ್ಟುತ್ತದೆ, ಸುಲಭವಾಗಿ ಬೆಳೆಯುತ್ತದೆ. ಹಿಂಸೆಯ ಆಸ್ಫೋಟಕ್ಕೆ ಬೇಕಾದ ಪರಿಸರ ಇಂದು ಜಗತ್ತಿನಲ್ಲೆಲ್ಲಾ ವ್ಯಾಪಿಸಿದೆ. ಮುಖ್ಯ ಪರಿಸರ ರಾಜಕಾರಣದ್ದು. ರಾಜಕಾರಣವಿಲ್ಲದೆ ಸಮಾಜ ವ್ಯವಸ್ಥೆಯಿಲ್ಲ. ಸಮಾಜ ವ್ಯವಸ್ಥೆಗೂ ರಾಜಕಾರಣಕ್ಕೂ ಹೊಕ್ಕಳಬಳ್ಳಿಯ ಸಂಬಂಧವಿದೆ. ರಾಜಕಾರಣ ಪೂರ್ಣವಾಗಿ ಹಿಂಸಾಮಯವಾಗಿದೆ. ಗ್ರಾಮ ಮಟ್ಟದ ರಾಜಕಾರಣದಿಂದ ಹಿಡಿದು ವಿಶ್ವ ರಾಷ್ಟ್ರ ಸಂಸ್ಥೆಯ ರಾಜಕಾರಣದವರೆಗೂ ಅದು ಹಿಂಸಾಮಯವಾಗಿದೆ. ಹಿಂಸೆಯಲ್ಲಿ ನಂಬಿಕೆಯಲ್ಲದವರಿಗೆ ಅಥವಾ ಹಿಂಸೆಯನ್ನು ಕಾರ್ಯಗತಗೊಳಿಸಲು ಅಸಮರ್ಥರಾದವರಿಗೆ ರಾಜಕಾರಣದಲ್ಲಿ ಸ್ಥಾನವಿಲ್ಲ. ಆದ್ದರಿಂದ ರಾಜಕೀಯ ಕ್ಷೇತ್ರ ಹಿರಣ್ಯಕಶಪುಗಳಿಗೂ, ಹಿರಣ್ಯಾಕ್ಷರಿಗೂ

ಮೀಸಲಾಗಿಬಿಟ್ಟಿದೆ. ಇದಕ್ಕೆ ಉದಾಹರಣೆಯಾಗಿ ನಮ್ಮ ಮುಂದೆ ರಶಿಯಾ ಇದೆ. ಈಗ್ಗೆ ಐವತ್ತು ವರ್ಷಗಳ ಹಿಂದೆ ಒಂದು ಬೃಹತ್ ಒಕ್ಕೂಟ ರಾಷ್ಟ್ರವಾಗಿದ್ದ ದೇಶ ಇಂದು ಒಡೆದು ಚೂರಾಗಿದೆ. ನಮ್ಮ ಭಾರತ ದೇಶದಲ್ಲಿಯ ರಾಜ್ಯಗಳು ಒಡೆದು ಹೋಳಾಗುತ್ತಿವೆ. ಭಾರತ ಗಣರಾಜ್ಯ ದುರ್ಬಲಗೊಳ್ಳುತ್ತ ಹೋಗುತ್ತಿದೆ. ವಿಚ್ಛಿದ್ರಕಾರಕ ವಿಚಾರಗಳಿಗೆ ಬಲ ಬರುವುದು ಹಿಂಸಾಚಾರದ ಸಾಮರ್ಥ್ಯದಿಂದ. ರಾಜಕಾರಣ ಮತ್ತು ಹಿಂಸೆಗಳ ಸಂಲಗ್ನವಾದರೆ ಮನುಕುಲಕ್ಕೆ ಉಳಿಗಾಲವಿರುವುದಿಲ್ಲ. ಈಗಾಗಲೆ ಜಗತ್ತು ಎರಡು ವಿಶ್ವಯುದ್ಧಗಳನ್ನು ಅನುಭವಿಸಿಯಾಗಿದೆ. ಆದರೆ ಆ ಯುದ್ಧಗಳಿಂದ ಮನುಷ್ಯನಾಗಲೀ, ರಾಷ್ಟ್ರಗಳಾಗಲೀ ಪಾಠವನ್ನು ಕಲಿತಿಲ್ಲ. ಎರಡನೇ ಮಹಾಯುದ್ಧ ಮಗಿಯುತ್ತಿದಂತೆಯೇ ಮೂರನೇ ಮಹಾಯುದ್ಧದ ಸಿದ್ಧತೆಗಳು ನಡೆವಂತೆ ಜಾಗತಿಕ ರಾಜಕಾರಣ ತಿರುವು ಪಡೆದಿದೆ, ಭಯಾನಕ ಶಸ್ತ್ರಾಸ್ತ್ರಗಳ ಶೇಖರಣೆಯಾಗಿದೆ, ಯುದ್ಧಕ್ಕೆ ಭೂಮಿಯೊಂದೇ ಸಾಲದೆಂದು ಸಾಗರ ಮತ್ತು ಅಂತರಿಕ್ಷಗಳೂ ರಣಾಂಗಣವಾಗುವ ಸೂಚನೆಗಳು ಕಾಣಬರುತ್ತಿವೆ.

ಹಿಂಸೆಯೆಂಬುದು ಕೇವಲ ಭೌತಿಕ ಕ್ಷೇತ್ರದಲ್ಲಿ ಉಳಿದಿಲ್ಲ. ಈಗ ಬಹುವಾಗಿ ಮಾನಸಿಕ ಕ್ಷೇತ್ರದಲ್ಲಿ ಕೆಲಸಮಾಡುತ್ತಿದೆ. ಮಾನಸಿಕ ಕ್ಷೇತ್ರದಲ್ಲಿಯ ಹಿಂಸಾ ಬೀಜಗಳು ಮಾನವ ವ್ಯಾಪಾರದ ಸಮಸ್ತ ಕ್ಷೇತ್ರಗಳನ್ನೂ ಆವರಿಸಿಕೊಳ್ಳುತ್ತಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಹಿಂಸಾ ವಿಚಾರ ಬಹು ನಾಜೂಕು ರೀತಿಯಲ್ಲಿ ಕೆಲಸಮಾಡುತ್ತಿದೆ. ಶಿಕ್ಷಣ ತನ್ನ ಮೂಲ ಮಾನವೀಯ ಮೌಲ್ಯಗಳನ್ನು ಕಳಚಿಹಾಕಿ ಚಿನ್ನದ ಲೇಪವನ್ನು ಹಚ್ಚಿಕೊಂಡಿದೆ. ಆದ್ದರಿಂದ ಶಿಕ್ಷಣ ಹಣ ಸಂಪಾದನೆಯ ಸಾಧನವಾಗಿ ಯೋಗ್ಯರಲ್ಲದವರ ಸೊತ್ತಾಗಿದೆ, ತೊತ್ತಾಗಿದೆ. ಚಿನ್ನದ ಲೇಪಿನ ಶಿಕ್ಷಣ ಪಡೆದವರು ಚಿನ್ನದ ಬೇಟೆಯನ್ನೇ ಆಡುತ್ತಾರೆ. ಚಿನ್ನದ ಆಸೆಯೇ ಹಿಂಸೆಗೆ ಮೂಲ ಕಾರಣವಾಗುತ್ತದೆ. ಇಂದು ಆರ್ಥಿಕವಾಗಿ ಬಲಾಢ್ಯ ದೇಶವಾದ ಅಮೇರಿಕಾಕ್ಕೆ ಹಿಂಸೆಯಲ್ಲದೆ ಬೇರೆ ಮಾರ್ಗ ಗೊತ್ತಿಲ್ಲ. ವಿಶ್ವದ ಎಲ್ಲ ತೈಲವೂ ಅದಕ್ಕೆ ಬೇಕು. ವಿಶ್ವದ ಹಿಂದುಳಿದ ರಾಷ್ಟ್ರಗಳೂ ಅದರ ಮಾರುಕಟ್ಟೆಯಾಗಿರಬೇಕು, ಇಲ್ಲವೇ ತಾನು ತುಳಿದ ದಾರಿಯನ್ನೇ ಅವು ತುಳಿಯಬೇಕು. ಚಿನ್ನದ ಬೇಟೆಯಾಟ ಜಗತ್ತಿನ ಅರಣ್ಯಗಳ ನಾಶಕ್ಕೆ, ಸಾಗರಗಳ ನಾಶಕ್ಕೆ, ಪರಿಸರದ ನಾಶಕ್ಕೆ ಕಾರಣವಾಗಿದೆ. ಇದೆಲ್ಲವೂ ಹಿಂಸೆಯ ಇನ್ನೊಂದು ಮುಖ. ಹಿಂಸೆ ಪ್ರತಿಯೊಂದು ರಾಷ್ಟ್ರ ಜೀವನದ, ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಈ ಅವಸ್ಥೆಯನ್ನು ಡಿ.ವಿ.ಜಿಯವರು ತಮ್ಮ

ಜೀವ–ಸಾವು ಎಂಬ ಕವನದಲ್ಲಿ ಹೀಗೆ ಬಿಂಬಿಸಿದ್ದಾರೆ :–

ಕಡಲ ಬಳಿ ಮಣಲಂತೆ
ಒಡಲ ಬಳಿ ನೆಳಲಂತೆ
ಹೂವಿನಲಿ ಕಾಯಂತೆ
ಹುತ್ತದಲಿ ಹಾವಂತೆ
ಮೆರೆಯುತಿದೆ ಮರೆಯಲಿದೆ
ಸಾವು ಜೀವದೊಡಂ
ಹಾಲಿನಲಿ ಕೆನೆಯಂತೆ
ಹಣ್ಣಿನಲಿ ಕ್ರಿಮಿಯಂತೆ
ಬಸರಿನಲಿ ಶಿಶುವಂತೆ
ಮೆರೆಯುತಿದೆ ಮರೆಯಲಿದೆ
ಸಾವು ಜೀವದೊಡಂ

ಇದೇ ಕವಿ ಇನ್ನೊಂದೆಡೆ ಮನುಷ್ಯನನ್ನು "ನಡೆವ ಮಸಾಣ ನೋಡಾ" ಎಂದು ಕರೆದಿದ್ದಾರೆ. ಇಡೀ ಜಗತ್ತೇ ಹಿಂಸೆಯ ಕಾರಣದಿಂದ ಮಸಣವಾಗಿದೆ.

ಆದ್ದರಿಂದ ಅತಿ ಪ್ರಗತಿಯ, ಅತಿ ತಂತ್ರಜ್ಞಾನ ಬೆಳವಣಿಗೆಯ, ಅತಿ ಹಣದಾಸೆಗೆ ಹಚ್ಚಿರುವ, ಅತಿ ಧರ್ಮಾಂಧತೆಗೆ ಪ್ರೋತ್ಸಾಹ ನೀಡುತ್ತಿರುವ ಎಲ್ಲ ಕ್ಷೇತ್ರಗಳಲ್ಲಿ ಅತಿಯನ್ನು ತಂದಿಟ್ಟಿರುವ ನಮ್ಮೀ ಇಪ್ಪತ್ತೊಂದನೇ ಶತಮಾನದಲ್ಲಿಯೇ ನಮ್ಮ ಆದ್ಯತೆ ಹಿಂಸೆಯೋ, ಅಹಿಂಸೆಯೋ ಎಂಬುದು ಇತ್ಯರ್ಥವಾಗಬೇಕಿದೆ.

ಭೂಮಿಯ ಮೇಲೆ ಮನುಕುಲ ಉಳಿದು ತನ್ನ ಸಾರ್ಥಕತೆಯನ್ನು ಸಿದ್ಧಿಸಿಕೊಳ್ಳಬೇಕಾದರೆ ಅಹಿಂಸಯೇ ನಮ್ಮ ಪ್ರಥಮ ಆದ್ಯತೆಯಾಗಬೇಕು. ಅಹಿಂಸೆಯನ್ನು ಹೇಗೆ ದಿನನಿತ್ಯದ ಆಚರಣೆಯಲ್ಲಿ ತರಬೇಕು, ಅದಕ್ಕಾಗಿ ಯಾವ ಪ್ರಕಾರದ ರಾಜಕೀಯ, ಆರ್ಥಿಕ, ಶೈಕ್ಷಣಿಕ ಕ್ರಮಗಳಿರಬೇಕು ಎಂಬುದರ ಬಗ್ಗೆ ಗಂಭೀರವಾದ ಚರ್ಚೆ ಜಗತ್ತಿನ ಎಲ್ಲ ಧಾರ್ಮಿಕ ಸಂಸ್ಥೆಗಳಲ್ಲಿ, ವಿಶ್ವ ವಿದ್ಯಾನಿಲಯಗಳಲ್ಲಿ, ಶಾಸನ ಸಭೆಗಳಲ್ಲಿ, ವಾಣಿಜ್ಯ ವ್ಯವಹಾರಗಳಲ್ಲಿ, ಮನೆ–ಮನೆಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ ಚರ್ಚೆಯಾಗಬೇಕು ಮತ್ತು ಅಹಿಂಸಾಚರಣೆಯ ವ್ಯವಹಾರಿಕ ಕ್ರಮಗಳನ್ನು ಕಂಡು ಹಿಡಿಯಬೇಕು. ಹಾಗಾದಾಗ ಮಾತ್ರ ಅಹಿಂಸೆಯೇ ಪರಮ ಧರ್ಮವೆನಿಸಿ ಈ ಭೂಮಿ ಮನುಕುಲದ ವಾಸಕ್ಕೆ ಯೋಗ್ಯವಾಗುವುದು.

* * *

ವಿದೇಶಗಳಲ್ಲಿ ಕಪ್ಪು ಹಣದ ಬೃಹತ್ ಜಮಾವಣೆ

– ಸುಧಾಂಶು ಮೊಹಂತಿ

ನಮ್ಮ ದೇಶದಲ್ಲಿ ಲಂಚ ಮತ್ತು ಕಪ್ಪು ಹಣದ ವಿರುದ್ಧ ಹೋರಾಟದ ಗದ್ದಲದಲ್ಲಿ ಒಂದು ಮುಖ್ಯವಾದ ಸಂಗತಿಯನ್ನು ಮರೆಯಲಾಗುತ್ತಿದೆ. ಅದು ಯಾವುದೆಂದರೆ ವಿಶ್ವದಾದ್ಯಂತ ತೆರಿಗೆ ವಿನಾಯಿತಿ ಇರುವ ಪ್ರದೇಶಗಳಲ್ಲಿ ಅಕ್ರಮವಾಗಿ ಜಮಾವಣೆ ಆಗಿರುವ ಐಶ್ವರ್ಯಗಳ ಮೊತ್ತ.

ಸ್ವಿಸ್ ಬ್ಯಾಂಕಿಂಗ್ ಅಸೋಸಿಯೇಶನ್ ೨೦೦೬ ವರದಿ ಪ್ರಕಾರ ಸ್ವಿಸ್ ಬ್ಯಾಂಕುಗಳಲ್ಲಿ ಅತೀ ಹೆಚ್ಚು ಠೇವಣಿ ಜಮಾ ಮಾಡಿದ ಐದು ದೇಶಗಳ ವಿವರ ಈ ರೀತಿಯಿದೆ.

ಭಾರತ – ೧೪೫೬ ಬಿಲಿಯನ್ ಡಾಲರ್‌ಗಳು
ರಷ್ಯಾ – ೪೭೦ ಬಿಲಿಯನ್ ಡಾಲರ್‌ಗಳು
ಬ್ರಿಟನ್ – ೩೯೦ ಬಿಲಿಯನ್ ಡಾಲರ್‌ಗಳು
ಯುಕ್ರೇನ್ – ೧೦೦ ಬಿಲಿಯನ್ ಡಾಲರ್‌ಗಳು
ಚೀನಾ – ೯೬ ಬಿಲಿಯನ್ ಡಾಲರ್‌ಗಳು

(ವಿ.ಸೂ. ೧ ಬಿಲಿಯನ್ ಡಾಲರ್ ಅಂದರೆ ಸುಮಾರು ೫೦೦೦ ಕೋಟಿ ರೂಪಾಯಿ)

ಭಾರತೀಯರು ಅಕ್ರಮ ಸಂಪಾದನೆಯಿಂದಮಾಡಿದ ಸುಮಾರು ರೂ.೭೩,೦೦,೦೦೦ ಕೋಟಿ. ಇದು ಬೇರೆ ದೇಶವಾಸಿಗಳು ಮಾಡಿದ ಠೇವಣಿಗಳ ಒಟ್ಟು ಮೊತ್ತಕ್ಕಿಂತ ಜಾಸ್ತಿಯಿದ್ದು ಭಾರತ ಪ್ರಥಮ ಸ್ಥಾನದಲ್ಲಿದೆ. ಈ ನಮ್ಮ ಸಾಧನೆಗೆ ಹೆಮ್ಮೆ ಪಡಬೇಕೋ ಅಥವಾ ಲಜ್ಜಿತರಾಗಬೇಕೋ ತಿಳಿಯದು. ವಿಷಾದದ ಸಂಗತಿಯೆಂದರೆ ಇಂತಹ ಬೃಹತ್ ಸಂಪತ್ತು ನಮ್ಮ ಆರ್ಥಿಕ ವ್ಯವಸ್ಥೆಯಿಂದ ವಂಚಿತವಾಗಿದೆ.

ಖ್ಯಾತ ಆರ್ಥಿಕ ತಜ್ಞ ರೇಮಂಡ್ ಬೇಕರ್ ಪ್ರಕಾರ ಲಂಚ ಮತ್ತು ಕಪ್ಪು ಹಣ ಶೇಖರಣೆ ಬಹಳ ಕೆಟ್ಟದ್ದು. ಆದರೆ ಅದು ಆಯಾಯ ದೇಶದಲ್ಲಿಯೇ ಇದ್ದರೆ ಮರು ಚಲಾವಣೆ ಮೂಲಕ ಆ ದೇಶದ ಆರ್ಥಿಕ ವ್ಯವಸ್ಥೆಗೆ ಒಂದು ರೀತಿ ಸಹಾಯಕವಾಗುತ್ತದೆ. ಆದರೆ ಈ ಶೇಖರಣೆ ಹೊರ ದೇಶಕ್ಕೆ ರವಾನೆಯಾದರೆ ಘಾತಕವಾಗುತ್ತದೆ. ಏಕೆಂದರೆ ಅದು ಮತ್ತೆ ಸ್ವದೇಶಕ್ಕೆ ಮರಳುವ ಸಾಧ್ಯತೆ ಬಹಳ ಕಡಿಮೆ.

೧೯೬೦ರ ಇಸವಿ ನಂತರ ಪಾಶ್ಚಾತ್ಯ ದೇಶಗಳು ಅಕ್ರಮ ಹಣ ಜಮಾವಣೆಗೆ ಬೇಕಾಗುವ ಸೌಕರ್ಯ ಮತ್ತು ಕಾನೂನಿನ ವ್ಯವಸ್ಥೆ ಮಾಡಿದರು. ೧೯೫೦–೬೦ ದಶಕದಲ್ಲಿ ಸುಮಾರು ೪೮ ರಾಷ್ಟ್ರಗಳು ಸ್ವತಂತ್ರವಾದವು. ಆ ದೇಶಗಳ ನೇತಾರರು ಮತ್ತು ಶ್ರೀಮಂತರು ತಾವು ಅಕ್ರಮವಾಗಿ ಸಂಪಾದಿಸಿದ ಐಶ್ವರ್ಯವನ್ನು ಗೌಪ್ಯವಾಗಿ ಮತ್ತು ಸುರಕ್ಷಿತವಾಗಿರಲು, ಪರದೇಶಕ್ಕೆ ರವಾನೆ ಮಾಡಲು ಉದ್ಯುಕ್ತರಾದರು.

ಇಡೀ ಪ್ರಪಂಚದಲ್ಲಿ ತೆರಿಗೆ ವಿನಾಯಿತಿ ಇರುವ ೭೦ ಪ್ರದೇಶಗಳಿವೆ. ಇಲ್ಲಿ ನಿಗೂಢವಾದ ಮತ್ತು ರಹಸ್ಯವಾದ ಲೆಕ್ಕವಿಟ್ಟಿರುತ್ತಾರೆ. ಇಲ್ಲಿ ಜಮಾ ಮಾಡಿದ ಠೇವಣಿಗಳ ನಿಜವಾದ ಮಾಲಿಕರು ಯಾರು ಎಂದು ಸುಲಭವಾಗಿ ತಿಳಿಯಲು ಸಾಧ್ಯವಿಲ್ಲ. ಒಂದು ವೇಳೆ ಇದರ ಬಗ್ಗೆ ತನಿಖೆ ಅಥವಾ ತಪಾಸಣೆಗೆ ಬಂದರೆ ಕೂಡಲೇ ಬ್ಯಾಂಕಿನವರು ನಿಜವಾದ ಮಾಲಿಕರಿಗೆ ತಿಳಿಸದೆಯೇ ಠೇವಣಿಯನ್ನು ವರ್ಗಾವಣೆ ಮಾಡಿಬಿಡುತ್ತಾರೆ. ಹೆಚ್ಚಿನವರು ಬೇನಾಮಿ ಹೆಸರಿನಲ್ಲಿ ಅಥವಾ ಲೋಕಸಂಗ್ರಹ ಅಥವಾ ದಾನಶೀಲ ಸಂಸ್ಥೆ ಹೆಸರಿನಲ್ಲಿ ಖಾತೆ ತೆರೆದು ಅದರ ಮಾಲಿಕರೇ ಫಲಾನುಭವಿಗಳಾಗಿ ತೆರಿಗೆ ವಿನಾಯಿತಿಯ ಲಾಭ ಪಡೆಯುತ್ತಾರೆ.

೧೯೬೦-೭೦ ರ ದಶಕದಲ್ಲಿ ಮಾದಕ ಪದಾರ್ಥಗಳ ವ್ಯವಹಾರಿಗಳು ವಿಶ್ವದಾದ್ಯಂತ ತಮ್ಮ ಹಣದ ಚಲಾವಣೆಗೆ ಪ್ರಯೋಜನ ಪಡೆದುಕೊಂಡರು. ೧೯೮೦-೯೦ ರ ದಶಕದಲ್ಲಿ ಅಕ್ರಮ ಸಂಪಾದನೆ ಮಾಡಿದ ಶ್ರೀಮಂತರು,ವಿಲಾಸಿಗಳು ಮತ್ತು ರಾಜಕಾರಣಿಗಳು ಬ್ಯಾಂಕಿಂಗ್ ವ್ಯವಸ್ಥೆಯ ಲಾಭ ಪಡೆದುಕೊಂಡರು.

೧೯೯೦ ಇಸವಿ ನಂತರ ಭಯೋತ್ಪಾದನೆ ಚಟುವಟಿಕೆಗೆ ಆರ್ಥಿಕ ಸಹಾಯ ಮಾಡುವವರಿಗೆ ಈ ವ್ಯವಸ್ಥೆ ಒಳ್ಳೆಯ ಅನುಕೂಲವಾಯಿತು.

ಒಂದು ಆಶ್ಚರ್ಯ ಸಂಗತಿಯೆಂದರೆ ಈ ಜಾಗತಿಕ ಹಣದ ವ್ಯವಹಾರದ ಮೊತ್ತದಲ್ಲಿ ಲಂಚದ ಭಾಗ ಕೇವಲ ೩ ಶೇಕಡ. ದುಷ್ಕಾರ್ಯ ಅಥವಾ ಪಾತಕಗಳ ಭಾಗ ೩೩ಶೇಕಡ ಬಾಕಿ ೬೪ ಶೇಕಡ ತೆರಿಗೆ ಲೆಕ್ಕಕ್ಕೆ ಸಿಗದ ಭಾಗ. ಇದು ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಕೃತ್ರಿಮ ಬೆಲೆ ಮತ್ತು ಬಂಡವಾಳ ವ್ಯವಹಾರಗಳಲ್ಲಿ ಕೃತ್ರಿಮ ಪ್ರಮಾಣ ಪತ್ರಗಳ ಮೂಲಕ ಮಾಡಿದ ಅಕ್ರಮ ಸಂಪಾದನೆ. ಇದರ ಬಗ್ಗೆ ಆಯಾಯ ದೇಶದವರು ನಿಗಾವಹಿಸಿ ತಡೆಹಿಡಿದರೆ ಹೊರ ದೇಶಕ್ಕೆ ಹರಿಯುವ ಶೇಕಡ ೬೪ರಷ್ಟು ಸಂಪನ್ಮೂಲಗಳನ್ನು ಉಳಿಸಿಕೊಳ್ಳಬಹುದು.

(ಕನ್ನಡಕ್ಕೆ : ಕೆ.ಆರ್.ಮೋಹನ್, ಮೈಸೂರು)

* * *

ಜನಪದ ವ್ಯಕ್ತಿ

ಶೇಖ್ ಮಹಮ್ಮದ್ ಅಬ್ದುಲ್ಲಾ

ಕೆಲ ವ್ಯಕ್ತಿಗಳು ಈಗಿಲ್ಲದಿದ್ದರೂ ತಮ್ಮ ವಿಚಾರ, ಕೃತಿಗಳಿಂದ ವರ್ತಮಾನದಲ್ಲೂ ನೆನಪಿಗೆ ಅರ್ಹರಾಗಿರುತ್ತಾರೆ, ರಾಜಕೀಯ ಕ್ಷೇತ್ರದಲ್ಲಿ ಈ ಮಾತು ವಿಶೇಷವಾಗಿ ಅನ್ವಯಿಸುತ್ತದೆ. ಈಗ ತಾನೇ ಜಮ್ಮು ಕಾಶ್ಮೀರದಲ್ಲಿ ಚುನಾವಣೆ ಮುಗಿದಿದೆ. ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಬಹುಮತ ಪಡೆದಿದೆ. ಆ ರಾಜ್ಯದ ಮುಖ್ಯಮಂತ್ರಿಯಾಗಿ 'ಒಮರ್ ಅಬ್ದುಲ್ಲಾ' ಅಧಿಕಾರ ವಹಿಕೊಳ್ಳಲಿದ್ದಾರೆ. ಇವರ ತಾತ ಶೇಖ್ ಮಹಮ್ಮದ್ ಅಬ್ದುಲ್ಲಾ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸಿ, ೧೯೭೫ರಲ್ಲಿ ಅದೇ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಆಗ ಇಂಧಿರಾ ಗಾಂಧಿಯವರೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಮೇರೆಗೆ ಅವರು ಪ್ರತ್ಯೇಕ ಕಾಶ್ಮೀರದ ಬೇಡಿಕೆಯನ್ನು ಬದಿಗಿಟ್ಟು ರಾಜಕಾರಣದ ಮುಖ್ಯ ಪ್ರವಾಹ ಸೇರಿಕೊಂಡರು. ಆ ರಾಜ್ಯದ ಶತಮಾನಗಳ ಬಡತನದ ಸಂಕೋಲೆಯಿಂದ ಜನತೆಯನ್ನು ಬಿಡಿಸಲು ಬಹು ಮಹತ್ವದ ಪಾತ್ರ ವಹಿಸಿದರು. ಕಾಶ್ಮೀರದ ರಾಜಕಾರಣದ ಏರಿಳಿತದಲ್ಲಿ ಹದಿನೇಳು ಬಾರಿ ಜೈಲುವಾಸ ಅನುಭವಿಸಿದರು. ಆದರೆ ಅವರು ಎಂದೂ ಮತಾಂತರ ಆಗಿರಲಿಲ್ಲ. ಬದಲಿಗೆ ತಮ್ಮನ್ನು ಕಷ್ಟಜೀವಿಗಳೊಂದಿಗೆ ಗುರುತಿಸಿಕೊಂಡರು. ಬಾಲ್ಯದಲ್ಲಿ ಶ್ರಮಜೀವಿ ಕಾಶ್ಮೀರಿಗಳ ಬಡತನದಿಂದ ತುಂಬ ನೊಂದವರಾದರು. ಆಗ ಕಾಶ್ಮೀರದಲ್ಲಿ ಮಹಾರಾಜ ಹರಿಸಿಂಗರ ಆಳ್ವಿಕೆ ನಡೆಯುತ್ತಿತ್ತು. ಶೇಖ್‌ರವರು ಜಮ್ಮುಕಾಶ್ಮೀರದ ಪ್ರಧಾನ ಮಂತ್ರಿಯಾದ ಕೂಡಲೇ ಕಾಶ್ಮೀರಿಗಳ ಪರಿಸ್ಥಿತಿಯಲ್ಲಿ ಸುಧಾರಣೆ ತರುವುದೇ ಅವರ ಮುಖ್ಯ ಕೆಲಸವಾಗಿತ್ತು. ಭೂಮಾಲೀಕರಿಗೆ ಪರಿಹಾರವನ್ನೀಯದೆ ಭೂಮಿಯನ್ನು ಪಡೆದು ಭೂಹೀನರಿಗೆ ಭೂಮಿ ಹಂಚಿದರು. ಇಂತಹ ದಿಟ್ಟ ಕ್ರಮವನ್ನು ಕೈಗೊಂಡ ಪ್ರಥಮ ರಾಜ್ಯ ಇದಾಯಿತು. ಮುಂದೆ ಇದೇ ರೀತಿಯ ಐತಿಹಾಸಿಕ ಮಹತ್ವದ ಸುಧಾರಣೆ ಕ್ರಮ ಕೈಗೊಂಡರು. ಕಾಶ್ಮೀರಿಗಳು ಇವರಿಗೆ ತುಂಬ ಕೃತಜ್ಞರಾಗಿದ್ದಾರೆ. ಬಡವರಿಗಾಗಿ ಅವರು ಬಹಳಷ್ಟು ತ್ಯಾಗ ಮಾಡಿದರು. ೧೯೩೯ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದಾಗ ಶೇಖ್ ಅಬ್ದುಲ್ಲಾರ ನಾಯಕತ್ವದಲ್ಲಿ ಕಾಶ್ಮೀರದ ಬಡ ಜನತೆಯ ಆಶೋತ್ತರವನ್ನು ಪ್ರತಿನಿಧಿಸುವ "ಹೊಸ ಕಾಶ್ಮೀರ"ದ ನೀಲ ನಕ್ಷೆ ರೂಪಗೊಂಡಿತು. ಶೇಖ್‌ರು ತಮ್ಮ ಜನತೆ ರಾಜಕೀಯವಾಗಿ ಜಾಗೃತರಾಗುವಂತೆ ಮಾಡಿದರು. ಹೊಸ ಕಾಶ್ಮೀರದ ಚಳುವಳಿಯ ಉದ್ದೇಶ ಜನತೆಗೆ ಉತ್ತಮ ಮತ್ತು ಸುಖ ಜೀವನವನ್ನು ತರುವುದೇ ಆಗಿತ್ತು. ಈ ಕ್ರಮಗಳು ಕಾಶ್ಮೀರ ರಾಜ್ಯದ ಶೇಕಡ ೭೫ರಷ್ಟು ಗ್ರಾಮೀಣರ ಆರ್ಥಿಕ ಪರಿಸ್ಥಿತಿಯ ಮೇಲೆ ಒಳ್ಳೆಯ ಪರಿಣಾಮ ಬೀರಿತು. ಇಂಥ ರಚನಾತ್ಮಕ ಕ್ರಮಗಳಿಂದಾಗಿ ಕಾಶ್ಮೀರದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ನೆಲೆಸಿಕ್ಕಿತು. ಶೇಖ್ ಅಬ್ದುಲ್ಲಾ ಭಾರತದ ರಾಜಕಾರಣದಲ್ಲಿ ಐವತ್ತು ವರ್ಷ ತಮ್ಮ ಪ್ರಭಾವ ಬೀರಿದ್ದರು.

೨೫ ನೇ ಪುಟನೋಡಿ..

ಯಾವುದೇ ಅಧಿಕಾರ ಬಯಸದ ಸ್ವಾತಂತ್ರ್ಯ ಯೋಧರು

– *ಸತ್ಯವ್ರತ*

ನರಹರಿ ಪರೀಖ (೧೮೯೧–೧೯೫೭)

೧೯೧೩ರಲ್ಲಿ 'ಲಾ' ಶಿಕ್ಷಣ ಮುಗಿಸಿದರು.೧೯೧೫ರಲ್ಲಿ ಗಾಂಧೀ ಭೇಟಿಯಾಗಿ ೧೯೧೭ ರಲ್ಲಿ ಅವರ ಆಶ್ರಮ ಸೇರಿದರು. ಚಂಪಾರಣ್ಯ ಸತ್ಯಾಗ್ರಹದಲ್ಲಿ ಕಾರ್ಯ ಮಾಡಿದರು. ಅನಂತರ ಬಾರ್ಡೋಲಿ ಸತ್ಯಾಗ್ರಹ ಸೇರಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಸೇಂಧಾಣಾಸಾ ಉಪ್ಪು ಡಿಪೋ ಮುಂದೆ ನಡೆದ ಪೋಲಿಸ್ ಕಾರ್ಯಾಚರಣೆಯಲ್ಲಿ ಬಹಳವಾಗಿ ಪೆಟ್ಟು ತಿಂದರು. ತಲೆಗೆ ತೀವ್ರ ಆಘಾತವಾಯಿತು. ಮೂರು ವರ್ಷ ಕಾರಾಗ್ರಹ ಶಿಕ್ಷೆ ಆಯಿತು. ಬಿಡುಗಡೆಯ ನಂತರ ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯ ಮಾಡಿದರು. ೧೯೨೮ ರಲ್ಲಿ ಗುಜರಾತ್ ವಿದ್ಯಾಪೀಠದ ಉಪಕುಲಪತಿಗಳಾದರು. ಸಾಬರಮತಿ ಆಶ್ರಮದ ಶಿಕ್ಷಣ ಕಾರ್ಯವನ್ನೆಲ್ಲಾ ೧೯೩೫ ರಿಂದ ೧೯೪೮ ರವರೆಗೆ ನೋಡಿಕೊಂಡರು.೧೯೩೭ ರಲ್ಲಿ ಎಲ್ಲೆಡೆ ಕಾಂಗ್ರೆಸ್ ಸರ್ಕಾರಗಳು ನಡೆಯುತ್ತಿದ್ದಾಗ ಅವರು ಬೇಸಿಕ್ ಎಜುಕೇಷನ್ ಬೋರ್ಡ್‌ನ ಛೇರ್ಮನ್ನರಾದರು.೧೯೪೪ ರಲ್ಲಿ ಬಿಡುಗಡೆಯಾದಾಗ ಅವರು ಸ್ವಲ್ಪ ಕಾಲ ಗಾಂಧೀಜಿಗೆ ಕಾರ್ಯದರ್ಶಿಯಾಗಿದ್ದರು. ಸಂಪಾದಕರಾಗಿ, ಬರಹಗಾರರಾಗಿ, ಅವರು ಒಳ್ಳೆಯ ಮಾನ್ಯತೆ ಗಳಿಸಿದರು. ಕಿಶೋರ್‌ಲಾಲ್, ಮಹದೇವದೇಸಾಯಿ, ಮತ್ತು ಸರ್ದಾರ್ ಪಟೇಲರ ಜೀವನ ಚರಿತ್ರೆಗಳನ್ನು ಬರೆದರು. ಅವು ಉತ್ಕೃಷ್ಟ ದರ್ಜೆಯವೆನಿಸಿದವು. ಹಿಂದುಳಿದ ವರ್ಗಗಳ ಹಿತರಕ್ಷಣೆಗೂ ದುಡಿದರು.

ಅಮೃತ್‌ಲಾಲ್ ಠಕ್ಕರ್ (ಠಕ್ಕರ್ ಬಾಪಾ) (೧೮೬೯–೧೯೫೧)

೧೮೮೭ರಲ್ಲಿ ಇಂಜಿನಿಯರಾದರು. ೧೮೯೦–೧೯೦೦ ಕಾಥೇವಾಡದ ಅನೇಕ ರಾಜ್ಯಗಳಲ್ಲಿ ಕೆಲಸಮಾಡಿದರು. ೧೯೦೦ರಲ್ಲಿ ಪೂರ್ವ ಆಫ್ರಿಕಾಕ್ಕೆ ಹೋಗಿ ಮೂರು ವರ್ಷ ಕಾರ್ಯಮಾಡಿದರು. ವಾಪಸು ಬಂದು ಸಾಂಗ್ಲಿಯಲ್ಲಿ ಛೀಫ್ ಇಂಜಿನಿಯರ್‌ರಾದರು. ಅಲ್ಲಿ ಗೋಖಲೆ, ಕರ್ವೆ ಇವರ ಸಂಪರ್ಕಕ್ಕೆ ಬಂದರು. ಅನಂತರ ಬೊಂಬಾಯಿಗೆ ಬಂದಾಗ ಪರಿಶಿಷ್ಟ ವರ್ಗದ ಕೆಲಸಗಾರರ ಸಂಪರ್ಕ ಬೆಳೆಯಿತು. ಅಲ್ಲಿ ಬೀದಿ ಕಸ ಗುಡಿಸುವವರ ಸಾಲಶೂಲಗಳ ಪರಿಹಾರಕ್ಕಾಗಿ ಪ್ರಯತ್ನಿಸಿದರು. ಅನಂತರ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಸೇರಿದರು. ಯು.ಪಿ. ಬರಗಾಲ ಪೀಡಿತರ ಮಧ್ಯೆ ಕೆಲಸ ಮಾಡಿದರು. ೧೯೧೭ರಲ್ಲಿ ಗೋಖಲೆಯವರ ಮೂಲಕ ಗಾಂಧೀಜಿಯ ಪರಿಚಯವಾಯಿತು. ದೇವಧರ್ ಮತ್ತು ಜೋಷಿಯವರೊಡಗೂಡಿ

ಖೇಡಾದಲ್ಲಿ ಬೆಳೆ ವೈಫಲ್ಯಕ್ಕೆ ಕಾರಣಗಳ ವಿಚಾರಣೆ ನಡೆಸಿ ವರದಿ ಸಲ್ಲಿಸಿದರು. ಕಡ್ಡಾಯ ಶಿಕ್ಷಣ ಬಿಲ್ ಸಂಬಂಧದಲ್ಲಿ ಗುಜರಾತಿನಾದ್ಯಂತ ಪ್ರವಾಸ ಮಾಡಿದರು. ೧೯೧೮-೧೯೧೯ ವರ್ಷಗಳಲ್ಲಿ ಪಂಚ್ ಮಹಾಲ್ಸ್ ಜಿಲ್ಲೆಯ ಭಿಲ್ಸ್ ಜನಾಂಗದ ಜನರ ಮಧ್ಯೆ ಕೆಲಸ ಮಾಡಿದರು. ಅವರ ದುರವಸ್ಥೆಯ ಜೀವನವನ್ನು ಪ್ರತ್ಯಕ್ಷ ಕಂಡರು. ಒರಿಸ್ಸಾ ಬರಗಾಲದಲ್ಲಿ ಕೆಲಸ ಮಾಡಿದರು. ೧೯೨೩ರಲ್ಲಿ ಭಿಲ್ ಸೇವಾ ಮಂಡಲ ಕಟ್ಟಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಸೆರೆಮನೆ ಕಂಡರು, ೬ ತಿಂಗಳ ಶಿಕ್ಷೆ ಅನುಭವಿಸಿದರು. ೧೯೩೨ರ ಗಾಂಧೀ ಉಪವಾಸದಲ್ಲಿ ಇಂಗ್ಲಿಷ್ ಸರ್ಕಾರದ ಕಮ್ಯೂನಲ್ ಅವಾರ್ಡ್‌ನ್ನು ವಿರೋಧಿಸಿ ನಡೆದ ಮಾತುಕತೆಯಲ್ಲಿ ಠಕ್ಕರ್ ಬಾಪಾ ಮಹತ್ವದ ಪಾತ್ರವಹಿಸಿ ಪುಣೆ ಒಪ್ಪಂದಕ್ಕೆ ನೆರವಾದರು. ಅನಂತರ ಹರಿಜನ ಸೇವಾ ಸಂಘದ ಕಾಯದರ್ಶಿಯಾಗಿ ಗಾಂಧಿ ಆಣತಿಯಂತೆ ಕಾರ್ಯ ನಿರ್ವಹಿಸಿದರು. ೩೩-೩೪ರಲ್ಲಿ ದೇಶಾದ್ಯಂತ ಕೈಗೊಂಡ ಹರಿಜನ ಪ್ರವಾಸದಲ್ಲಿ ಗಾಂಧೀಜಿಯ ಸಹಚರರಾಗಿ ೯ ತಿಂಗಳಲ್ಲಿ ೧೨,೫೦೪ ಮೈಲುಗಳ ಬಿರುಗಾಳಿ ಸಂಚಾರ ಮಾಡಿದರು. ४३-४४ ರಲ್ಲಿ ಒರಿಸ್ಸಾ ಬಂಗಾಳಗಳಲ್ಲಿ ಬರಗಾಲ ಪರಿಹಾರ ಕಾರ್ಯಮಾಡಿದರು. ಕಸ್ತೂರ ಬಾ ಟ್ರಸ್ಟ್ ಸೆಕ್ರೆಟರಿಯಾಗಿ ದುಡಿದರು. ೧೯೪೪ ರಲ್ಲಿ ಬನವಾಸಿ ಸೇವಾ ಮಂಡಲ ಕಟ್ಟಿದರು. ೧೯೪೬೦೪೭ ರಲ್ಲಿ ನೌಖಾಲಿಯಲ್ಲಿ ಹಿಂದೂ ಮುಸ್ಲಿಮರ ನಡುವೆ ಶಾಂತಿಗಾಗಿ ಗಾಂಧೀಜಿ ಜೊತೆಯಲ್ಲಿ ಕಾರ್ಯ ಮಾಡಿದರು. ಸ್ವಾತಂತ್ರ್ಯ ನಂತರ ಸಂವಿಧಾನ ಸಭೆಯ ಸದಸ್ಯರಾಗಿ ಅನೇಕ ಉಪ ಸಮಿತಿಗಳಲ್ಲಿ ಸದಸ್ಯರಾಗಿ ಕಾರ್ಯ ಮಾಡಿದರು. ರಾಷ್ಟ್ರೀಯ ಗಾಂಧಿ ಸ್ಮಾರಕ ನಿಧಿಯ ಟ್ರಸ್ಟಿಯಾದರು. ಸರ್ದಾರ ಪಟೇಲರ ನಿಧನಾನಂತರ ಕಸ್ತೂರ ಬಾ ನಿಧಿಯ ಅಧ್ಯಕ್ಷರಾದರು.

ಬ್ರಜ ಕಿಶೋರ್ ಪ್ರಸಾದ್ (೧೮೭೭-೧೯೪೬)

೧೯೦೧-೦೬ನೇ ವರ್ಷಗಳವರೆಗೆ ಬಿಹಾರದ ಛಪ್ರಾ ಮತ್ತು ದರ್ಭಾಂಗಾಗಳಲ್ಲಿ ವಕೀಲಿ ನಡೆಸಿದರು. ಗಾಂಧೀಜಿಯ ಚಂಪಾರಣ್ಯ ಸತ್ಯಾಗ್ರಹದಲ್ಲಿ ರಾಜೇಂದ್ರ ಪ್ರಸಾದರ ಜೊತೆಗೂಡಿ ಕೆಲಸ ಮಾಡಿದರು. ೧೯೩೦ರ ಸವಿನಯ ಕಾನೂನು ಭಂಗ ಚಳವಳಿಯಲ್ಲಿ ಬಂಧಿಸಲ್ಪಟ್ಟು ಸೆರೆಮನೆ ಸೇರಿದರು. ೧೯೩೪ರ ಬಿಹಾರ ಭೂಕಂಪದಲ್ಲಿ ಭೂಕಂಪಗ್ರಸ್ತ ಜನತೆಯ ರಕ್ಷಣೆಗಾಗಿ ಅಪಾರವಾಗಿ ಶ್ರಮಿಸಿದರು. ಪರದಾ ಪದ್ಧತಿಯ ವಿರೋಧ ಮತ್ತು ಮಹಿಳೆಯರ ಶಿಕ್ಷಣದಂಥ ಸುಧಾರಣಾ ಕಾರ್ಯಕ್ಕಾಗಿ ದುಡಿದರು. ವಿಧವಾ ಪುನರ್ವಿವಾಹಕ್ಕೂ ಶ್ರಮಿಸಿದರು. ಅವರು ಜಯಪ್ರಕಾಶ ನಾರಾಯಣರಿಗೆ ತಮ್ಮ ಮಗಳು ಪ್ರಭಾವತಿಯನ್ನು ಕೊಟ್ಟು ಮದುವೆ ಮಾಡಿದರು.

ಕೊಂಡಾ ವೆಂಕಟಪ್ಪಯ್ಯ (೧೮೬೬-೧೯೪೯)

೧೮೯೧ ರಲ್ಲಿ ತಮ್ಮ ಶಿಕ್ಷಣ ಮುಗಿಸಿದರು. ಅಸ್ಪೃಶ್ಯತಾ ನಿವಾರಣೆ, ಮಹಿಳೆಯರ ಶಿಕ್ಷಣ, ವಿಧವಾ ವಿವಾಹದಂಥ ಸಾಮಾಜಿಕ ಸುಧಾರಣಾ ಕಾರ್ಯಗಳಲ್ಲಿ ಗಾಢ ನಂಬಿಕೆ ಮತ್ತು ಕಳಕಳಿ ಇದ್ದವು. ಅವರು 'ಕೃಷ್ಣ ಪತ್ರಿಕಾ'ದ ಸಂಪಾದಕರೂ ಆಗಿದ್ದರು. ಅವರು 'ಆಂಧ್ರ ಮಹಾ ಸಭಾ'ದ ಸಂಘಟಕರಲ್ಲೊಬ್ಬರಾಗಿದ್ದರು. ಪ್ರತ್ಯೇಕ ಆಂಧ್ರ ಪ್ರಾಂತ್ಯದ ರಚನೆಯೇ ಅದರ ಗುರಿಯಾಗಿತ್ತು. ೧೯೧೮ರಲ್ಲಿ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದರು. ೧೯೨೧ರಲ್ಲಿ ಗುಂಟೂರು ಜಿಲ್ಲೆಯಲ್ಲಿ ಕರನಿರಾಕರಣ ಚಳುವಳಿಯನ್ನು ಕಟ್ಟಿದರು. ಅದಕ್ಕಾಗಿ ಒಂದು ವರ್ಷ ಸಜಾ ಆಯಿತು. ೧೯೨೯ರ ಎ.ಐ.ಸಿ.ಸಿ ಅಧಿವೇಶನದ ಅಧ್ಯಕ್ಷತೆ ವಹಿಸಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಅವರಿಗೆ ಒಂದು ವರ್ಷ ಸೆರೆವಾಸವಾಯಿತು. ಪ್ರತಿಬಂಧಕಾಜ್ಞೆಯಲ್ಲಿದ್ದ ಕಾಂಗ್ರೆಸ್‌ನ ಸಭೆಯನ್ನು ಕರೆಯಲು ಯತ್ನಿಸಿದರೆಂಬ ಅಪಾದನೆಗೆ ಅವರಿಗೆ ಆರು ತಿಂಗಳ ಶಿಕ್ಷೆ ಆಯಿತು. ೧೯೩೪ರ ನಂತರ ವೆಂಕಟಪ್ಪಯ್ಯ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದರು.

ಅಬ್ಬಾಸ್ ತಯಾಬ್ಜಿ (೧೮೩೪-೧೯೩೬)

೧೮೭೫ ರಲ್ಲಿ ತಮ್ಮ ಶಿಕ್ಷಣ ಮುಗಿಸಿ ಇಂಗ್ಲೆಂಡಿನಿಂದ ಹಿಂತಿರುಗಿದ ಮೇಲೆ ೧೮೭೭ರಲ್ಲಿ ಬರೋಡಾ ರಾಜ್ಯ ಸೇವೆಗೆ ಸೇರಿದರು. ರಾಜ್ಯದ ಮುಖ್ಯನ್ಯಾಯಾಧೀಶರಾಗಿ ೧೯೧೩ರಲ್ಲಿ ನಿವೃತ್ತರಾದರು. ಅನೇಕ ವರ್ಷಗಳ ಕಾಲ ಅವರು ಬರೋಡಾದ ಅಂಜುಮಾನ್ -ಇ- ಇಸ್ಲಾಂನ ಅಧ್ಯಕ್ಷರಾದರು. ಜೀವನ ಪರ್ಯಂತ ಕಾಂಗ್ರೆಸ್ ಸದಸ್ಯರಾಗಿದ್ದರು. ಪಂಜಾಬಿನಲ್ಲಿ ನಡೆದ ಅತ್ಯಾಚರಣೆಗಳ ಮೇಲೆ ವಿಚಾರಣೆ ನಡೆಸಿ ವರದಿ ಮಾಡಲು ನಿಯಮಿಸಲ್ಪಟ್ಟಿದ್ದ ಉಪಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. ೧೯೧೯ರ ಕೊನೆಯವರೆಗೂ ಅದೇ ಕಾರ್ಯದಲ್ಲಿ ಮಗ್ನರಾಗಿದ್ದರು. ಈ ವಿಚಾರಣೆ ಅವರನ್ನು ಪೂರ್ಣವಾಗಿ ಬದಲಾಯಿಸಿತು. ಇಂಗ್ಲೆಂಡಿನ ಬಗ್ಗೆ ಅವರಿಗಿದ್ದ ದೃಷ್ಟಿಯೇ ಬದಲಾಗಿ ಬಂಡುಕೋರರೆನಿಸಿದರು. ೧೯೨೦ ರಲ್ಲಿ ಗುಜರಾತ್ ರಾಜಕೀಯ ಪರಿಷತ್ತಿನ ಅಧ್ಯಕ್ಷರಾದರು. ಅದು ಗಾಂಧೀಜಿಯವರ ಅಸಹಕಾರ ಚಳವಳಿಯನ್ನು ಒಪ್ಪಿತು. ಕಾಂಗ್ರೆಸ್ ಒಪ್ಪುವ ಮೊದಲೇ ರಾಜಕೀಯ ಪರಿಷತ್ತು ಒಪ್ಪಿದಂತಾಯಿತು. ೧೯೨೮ ಬಾರ್ಡೋಲಿ ಸತ್ಯಾಗ್ರಹದಲ್ಲಿ ಸೇರಿಕೊಂಡರು. ೧೯೩೦ರ ಉಪ್ಪಿನ ಸತ್ಯಾಗ್ರಹದಲ್ಲಿ ಕಾರ್ಯಮಾಡಿ ಗಾಂಧೀಜಿಯ ಬಂಧನವಾದನಂತರ ಅಬ್ಬಾಸರು ಚಳವಳಿಯ ನೇತೃತ್ವ ವಹಿಸಿದರು. ಅವರನ್ನು ಬಂಧಿಸಿ ಸೆರೆವಾಸಕ್ಕೆ ಕಳಿಸಿದರು. ೭೮ ವರ್ಷಗಳ ಇಳಿ ವಯಸ್ಸಿನಲ್ಲೂ ಅವರು ಕಾರಾಗೃಹದ ಕಷ್ಟ ಕೋಟಲೆಗಳನ್ನು ಅನುಭವಿಸಿದರು. ೧೯೩೨ ರಲ್ಲಿ ಪುನಃ ಕಾರಾಗೃಹ ಸೇರಿದರು. ೧೯೩೩ ರಲ್ಲಿ ಅವರು ಬರೋಡಾದ ಪ್ರಜಾಮಂಡಲದ ಅಧ್ಯಕ್ಷರಾದರು.

ಬಾಲಗಂಗಾಧರ ತಿಲಕ್ (೧೮೫೬–೧೯೨೦)

ಲೋಕಮಾನ್ಯರೆಂದೂ, ಭಾರತೀಯ ತುಮುಲದ ತಂದೆಯೆಂದೂ ಪ್ರಸಿದ್ಧರಾಗಿರುವ ತಿಲಕರು ೧೮೭೯ ರಲ್ಲಿ ತಮ್ಮ ಶಿಕ್ಷಣ ಮುಗಿಸಿದರು. ತಮ್ಮ ವಿಚಾರ ಮತ್ತು ಚಿಂತನೆಗಳಲ್ಲಿ ಸಂಪ್ರದಾಯ ಶರಣರೆನಿಸಿದರೂ, ವಿದೇಶೀ ವಿಚಾರಗಳ ಪರಿಚಯವನ್ನು ಚೆನ್ನಾಗಿ ಹೊಂದಿದವರಾಗಿದ್ದರು. ಅಗರ್‌ಕರ್, ಚಿಪ್ಲೂಂಕರ್, ನಾಮ್‌ಜೋಷಿ ಇವರೆಲ್ಲರ ಜೊತೆ ಸೇರಿ ಡೆಕ್ಕನ್ ಎಜುಕೇಷನ್ ಸೊಸೈಟಿ ಮತ್ತು ಫರ್ಗ್ಯೂಸನ್ ಕಾಲೇಜನ್ನು ಸ್ಥಾಪಿಸಿದರು. ೧೮೯೦ ರಲ್ಲಿ ಈ ಶಿಕ್ಷಣ ಸಂಸ್ಥೆಯ ಸಂಬಂಧ ಕಳಚಿಕೊಂಡರೂ, ಸಂಸ್ಥೇ ಹೊರಡಿಸುತ್ತಿದ್ದ ಕೇಸರಿ ಮತ್ತು ಮರಾಠಾ ಪತ್ರಿಕೆಗಳನ್ನು ಮಾತ್ರ ತಮ್ಮ ಹಿಡಿತದಲ್ಲಿಯೇ ಉಳಿಸಿಕೊಂಡರು. ರಾಜನೀತಿಯಲ್ಲಿ ಉಗ್ರಗಾಮಿಯಾಗಿದ್ದರೂ ಸಾಮಾಜಿಕ ವಿಚಾರಗಳಲ್ಲಿ ಸಂಪ್ರದಾಯಕ್ಕೆ ಕಟ್ಟು ಬಿದ್ದವರೇ ಆಗಿದ್ದರು. ೧೯೧೮ ರಲ್ಲಿ ಬರೋಡಾದ ಅ.ಭಾ. ಹಿಂದುಳಿದ ವರ್ಗಗಳ ಸಮ್ಮೇಳನಕ್ಕೇನೋ ಬಂದರು. ಆದರೆ ಸಮ್ಮೇಳನದ ಘೋಷಣಾ ಪತ್ರಕ್ಕೆ ರುಜು ಹಾಕಲು ತಿರಸ್ಕರಿಸಿದರು.

೧೮೮೬ರ ಬರಗಾಲ ಮತ್ತು ಪ್ಲೇಗ್ ಹರಡಿದ ರೀತಿಯಿಂದ ಅತೃಪ್ತರಾಗಿದ್ದು ಸರ್ಕಾರ ತೆಗೆದುಕೊಂಡ ಕ್ರಮಗಳಿಂದ ಬೇಸತ್ತರು. ಅದರಿಂದಾಗಿ ಅಂದಿನ ಸರ್ಕಾರಕ್ಕೂ ತಿಲಕರಿಗೂ ಸಂಘರ್ಷದ ಸ್ಥಿತಿ ಉಂಟಾಯಿತು. ೧೮೯೭ ರಲ್ಲಿ ಅವರನ್ನು ಬಂಧಿಸಿ, ರಾಜದ್ರೋಹದ ಆರೋಪ ಹೊರೆಸಿ, ೧೮ ತಿಂಗಳುಗಳ ಸೆರೆವಾಸಕ್ಕೆ ತಳ್ಳಿದರು. ತಿಲಕರ ವಿಚಾರಗಳು ಬಹುಬೇಗ ಜನತೆಯಲ್ಲಿ ವಿದ್ಯುತ್ ಸಂಚಾರ ಉಂಟುಮಾಡಿದವು. ರಾಷ್ಟ್ರೀಯ ಶಿಕ್ಷಣ, ಸ್ವದೇಶಿ ಮತ್ತು ಬಹಿಷ್ಕಾರಗಳು ಸ್ವರಾಜ್ಯವನ್ನು ತರಬಲ್ಲವೆಂಬ ಅವರ ಪ್ರತಿಪಾದನೆ ಜನತೆಯಲ್ಲಿ ಉತ್ಸಾಹ ಮೂಡಿಸಿದವು. ೧೯೦೮ ರಲ್ಲಿ ತಿಲಕರನ್ನು ಪುನಃ ಬಂಧಿಸಿ ಅವರು ಬರೆದ ಲೇಖನಗಳ ಆಧಾರದ ಮೇಲೆ ರಾಜ ದ್ರೋಹದ ಆಪಾದನೆ ಹೊರೆಸಿ ಆರು ವರ್ಷ ಶಿಕ್ಷೆ ವಿಧಿಸಿ ಮಾಂಡಲೆ (ಬರ್ಮ) ಸೆರೆಮನೆಯಲ್ಲಿಟ್ಟರು. ಅಲ್ಲಿ ಅವರು ಗೀತಾ ರಹಸ್ಯ ಬರೆದರು. ೧೯೧೪ ರಲ್ಲಿ ಬಿಡುಗಡೆಯ ನಂತರ ಹೋಂ ರೂಲ್ ಲೀಗ್ ಸ್ಥಾಪಿಸಿದರು. ೧೯೧೬ ರಲ್ಲಿ ಅವರು ಪುನಃ ಕಾಂಗ್ರೆಸ್‌ಗೆ ಬರುವಂತಾಯಿತು. ಬೊಂಬಾಯಿಯ ವಿಶೇಷ ಅಧಿವೇಶನ, ಅಮೃತಸರದ ಅಧಿವೇಶನಗಳಲ್ಲಿ ಮೌಂಟ್ ಫೋರ್ಡ್ ಸುಧಾರಣೆಗಳನ್ನು ವಿರೋಧಿಸಿದರು. ಏಪ್ರಿಲ್ ೧೯೨೦ ರಲ್ಲಿ ಸ್ವರಾಜ್ಯಕ್ಕಾಗಿ ಚಳವಳಿ ಸಂಘಟಿಸಲು ಕಾಂಗ್ರೆಸ್ ಡೆಮಾಕ್ರೆಟಿಕ್ ಪಾರ್ಟಿ ಕಟ್ಟಿದರು. ಅವರು ದೊಡ್ಡ ವಿದ್ವಾಂಸರು. ಮಾಂಡಲೆ ಜೈಲಿನಲ್ಲಿ ವೇದಾಧ್ಯಯನ ಮಾಡಿ 'ಓರಿಯನ್' ಎಂಬ ತಮ್ಮ ಗ್ರಂಥದಲ್ಲಿ ವೇದಗಳ ಕಾಲ ೫೦೦೦ ಕ್ರಿ.ಪೂ ಎಂದು ನಿರ್ಣಯಿಸಿ ಬರೆದರು. ಅವರ ಇನ್ನೊಂದು ಮಹತ್ವದ ಗ್ರಂಥ 'ದಿ ಆರ್ಕಟಿಕ್ ಹೋಂ ಇನ್ ದಿ ವೇದಾಸ್' ತಿಲಕರಿಂದ ಭಾರತದಲ್ಲಿ ಹೊಸಯುಗ ಪ್ರಾರಂಭವಾಯಿತು. ಆದ್ದರಿಂದ ಉಜ್ವಲ ದೇಶಭಕ್ತಿಯ ಪ್ರವಾಹ ಹರಿಯುವಂತಾಯಿತು. "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು". ನಾನದನ್ನು ಪಡೆಯುತ್ತೇನೆ ಎಂಬ ಅವರ ಮಂತ್ರ ದೇಶವನ್ನು ಬಡಿದೆಬ್ಬಿಸಿತು.

ವೇದದಲ್ಲಿಯ ಮುತ್ತುಗಳು

– ವಿನೋಬಾ

ಧೀಯೋ ಯೋನಃ ಪ್ರಚೋದಯಾತ್

"ದೇವರು ನನ್ನ ಬುದ್ಧಿಗೆ ಪ್ರೇರಣೆ ಕೊಡಲಿ" ಎಂಬ ವರವನ್ನು ಕೇಳಿದ್ದಾನೆ. ಪ್ರಾರ್ಥನೆಯ ಮುಖ್ಯ ಅಂಶ ಯಾವುದೆಂದು ಹೇಳಲಾಗುತ್ತದೋ ಅದು ಇಷ್ಟೇ. ಗಾಯತ್ರಿ ಮಂತ್ರವನ್ನು ಏಕಾಂತದಲ್ಲಿ ಹೇಳಲಾಗುತ್ತದೆಯಾದರೂ ಅದರಲ್ಲಿ ತನಗಾಗಿ ಯಾವುದನ್ನು ಬೇಡಲಾಗಿದೆಯೋ ಅದನ್ನು ಎಲ್ಲರಿಗಾಗಿಯೂ ಬೇಡುತ್ತ ಪ್ರಾರ್ಥನೆ ಮಾಡಲಾಗಿದೆ. ಈ ವಿಷಯ ಗಮನ ಸೆಳೆಯುವಂಥಾದ್ದಾಗಿದೆ. ಏಕಾಂತದಲ್ಲಿ ಕುಳಿತುಕೊಂಡಿದ್ದರೂ ತಾನು ಎಲ್ಲರ ಪ್ರತಿನಿಧಿಯೆಂದು ಭಾವಿಸಿ ಪ್ರಾರ್ಥನೆ ಮಾಡಲಾಗಿದೆ. ಅದರಲ್ಲಿ ಸಾಮೂಹಿಕ ಮತ್ತು ವ್ಯಕ್ತಿಗತ ಪ್ರಾರ್ಥನೆಯ ಜೋಡಣೆಯಿದೆ. ವ್ಯಕ್ತಿಗತ ಪ್ರಾರ್ಥನೆಯಲ್ಲಿ ಮನುಷ್ಯನು ತನಗಾಗಿ ಮಾತ್ರ ಎಂದು ಆಲೋಚಿಸುತ್ತಲೇ ಭಗವಂತನೊಂದಿಗೆ ತನ್ನ ಸಂಬಂಧವನ್ನು ಜೋಡಿಸುತ್ತಾನೆ. ಸಾಮೂಹಿಕ ಪ್ರಾರ್ಥನೆಯಲ್ಲಿ ಎಲ್ಲರಿಗಾಗಿ ಚಿಂತಿಸುತ್ತಾನೆ. ಅಂದರೆ ಸಮಾಜದೊಂದಿಗೆ ತನ್ನ ಸಂಬಂಧ ಜೋಡಿಸುತ್ತಾನೆ. ತನ್ಮೂಲಕ ಭಗವಂತನೊಂದಿಗೆ ಸಂಬಂಧ ಬೆಳೆಸುತ್ತಾನೆ. ಪ್ರಾರ್ಥನೆಗಳೆರಡೂ ಒಂದಕ್ಕೊಂದು ಪೂರಕವಾಗಿವೆ. ಭಗವಂತನ ಬಳಿ ಕುಳಿತು ತನಗಾಗಿ ಏನನ್ನಾದರೂ ಕೇಳಿದಾಗ ಅದರಲ್ಲಿ ನಾವು ಆತ್ಮದ ವ್ಯಾಪಕತೆಯನ್ನು ಒಪ್ಪಿಕೊಂಡು ಎಲ್ಲರಿಗಾಗಿ ಪ್ರಾರ್ಥಿಸಿದಾಗ ಆತ್ಮದ ವ್ಯಾಪಕತೆ ಸರಿಯಾಗಿ ಅರ್ಥವಾಗುತ್ತದೆ. ಆದ್ದರಿಂದ ಏಕಾಂತದಲ್ಲಿ ಕುಳಿತುಕೊಂಡಿದ್ದರೂ ಕೂಡ ಇದರಲ್ಲಿ ಸಮೂಹಕ್ಕಾಗಿ ಪ್ರಾರ್ಥನೆ ಮಾಡಲಾಗಿದೆ. ಇದು ಅದರ ವಿಶೇಷತೆ.

ಇದರಲ್ಲಿ ಇರುವ ಎರಡನೇ ವಿಶೇಷತೆಯೆಂದರೆ ಬುದ್ಧಿಗಾಗಿ ಪ್ರಾರ್ಥನೆ ಮಾಡಲಾಗಿದೆ. ಬುದ್ಧಿಗಾಗಿ ಪ್ರೇರಣೆಯನ್ನು ಕೊಡು ಎಂದು ಹೇಳಲಾಗಿದೆ. ಮನುಷ್ಯನಿಗೆ ಮಾರ್ಗದರ್ಶಕನ ರೂಪದಲ್ಲಿ ಅಂತಿಮ ವಸ್ತು ಬುದ್ಧಿಯೇ ಆಗಿದೆ. ಮನಸ್ಸು ಮತ್ತು ಇಂದ್ರಿಯ ಇತ್ಯಾದಿಗಳು ಇದರ ನಂತರದವು. ಗುರು ನಮಗೆ ಉಪದೇಶ ಕೊಟ್ಟಾಗ ಅದನ್ನು ಅರ್ಥಮಾಡಿಕೊಳ್ಳಲು ಬುದ್ಧಿ ಬೇಕು ಆದ್ದರಿಂದ ನಿರ್ಣಯ ತೆಗೆದುಕೊಳ್ಳುವ ಶಕ್ತಿ ಬಹಳ ಮಹತ್ವದ್ದಾಗಿ ಬಿಡುತ್ತದೆ. ಈ ಯುಗದಲ್ಲಿ ಅಷ್ಟೇ ಅಲ್ಲ ಪ್ರತಿಯೊಂದು ಯುಗದಲ್ಲಿಯೂ ಬುದ್ಧಿಯ ಮಾರ್ಗದರ್ಶನವನ್ನು ಒಪ್ಪ ಬೇಕು. ಕಠೋಪನಿಷತ್ತಿನಲ್ಲಿ ***ಬುದ್ಧಿಂ ತು ಸಾರಥಿಂ ವಿದ್ಧಿ*** ಎಂದು ಹೇಳಲಾಗಿದೆ. ಬುದ್ಧಿ ಸಾರಥಿ. ರಥವನ್ನು ಎಲ್ಲಿಗೆ ಒಯ್ಯಬೇಕಾಗಿದೆಯೋ ಅದಕ್ಕೆ ಸಾಧನ ಬುದ್ಧಿ. ಆದರೆ ಗೀತೆಯಲ್ಲಿ ಸ್ವಯಂ ಭಗವಂತನೇ ಸಾರಥಿಯಾಗಿದ್ದಾನೆ. ಅಲ್ಲಿಯೂ ಕೂಡ ಮನುಷ್ಯನ ಬುದ್ಧಿಗೆ ಪ್ರೇರಣೆಯನ್ನು ಕೊಟ್ಟೇ ಮುನ್ನಡೆಸುತ್ತಾನೆ. ಮನುಷ್ಯನ ಬುದ್ಧಿಗೆ ಚಾಲನೆಯನ್ನು ಕೊಡದೆ, ಪ್ರೇರಣೆಯನ್ನು ಕೊಡದೆ ಅವನ ಉದ್ಧಾರವನ್ನು ತಾನು ಮಾಡಬೇಕೆಂದು ಭಗವಂತ ಇಚ್ಛಿಸುವುದಿಲ್ಲ.

ಒಂದು ವೇಳೆ ಹಾಗೆ ಮಾಡಿದ್ದೇ ಆದರೆ ಮಾನವನ ವಿಕಾಸ ಆಗಲಾರದು. ಆದ್ದರಿಂದ ನೀನು ನಮಗೆ ನೆರವಾಗೆಂದು ಈ ಮಂತ್ರದಲ್ಲಿ ಭಗವಂತನನ್ನು ಪ್ರಾರ್ಥಿಸಲಾಗಿದೆ. ನನಗೆ ಇಲ್ಲಿ ಒಪ್ಪಿಸಲಾಗಿರುವ ಕೆಲಸವನ್ನು ಮಾಡಬೇಕಾದರೆ ಬುದ್ಧಿ ಬೇಕು. ಆದ್ದರಿಂದ ಬುದ್ಧಿಗಾಗಿ ಪ್ರೇರಣೆ ಕೊಡಿ ಎಂದು ಪ್ರಾರ್ಥಿಸಲಾಗಿದೆ.

ಬೇಡುವುದಾದರೆ ಬುದ್ಧಿಯನ್ನೇ ಕೇಳಬೇಕು ಏಕೆಂದರೆ ಬುದ್ಧಿಯು ಪ್ರೇರಣಾದಾಯಿ ಆಗಿರುವುದಲ್ಲದೆ ಒಂದು ಶಕ್ತಿಯೂ ಆಗಿದೆ. ಒಂದು ವೇಳೆ ಬುದ್ಧಿಯು ತಪ್ಪು ಪ್ರೇರಣೆ ಪಡೆದು ಅದು ತಪ್ಪು ದಿಕ್ಕಿನಲ್ಲಿ ಹೋಗಲು ಯೋಚಿಸಿದಲ್ಲಿ ಮನುಷ್ಯನ ಬುದ್ಧಿ ಅವನಿಗೆ ಅತ್ಯಂತ ನಷ್ಟವನ್ನುಂಟುಮಾಡುವುದು. ಆದ್ದರಿಂದ ಬುದ್ಧಿ ಸಾತ್ವಿಕವಾಗಿರಬೇಕು. ಸಾತ್ವಿಕ ಬುದ್ಧಿಗಾಗಿ ಪ್ರಾರ್ಥನೆ ಮಾಡಲಾಗಿದೆ. ಇದರಲ್ಲಿ ಭಗವದ್ ಭಕ್ತಿಯ ಜೊತೆ ಬುದ್ಧಿಯ ಮೇಲೂ ಒತ್ತು ಕೊಡಲಾಗಿದೆ. ಸಾಕ್ಷಾತ್ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಿರುವುದರಿಂದ ಭಗವದ್ ಭಕ್ತಿಯನ್ನು ಜೋಡಿಸಲಾಗಿದೆ. ಗಾಯತ್ರಿ ಮಂತ್ರವನ್ನು ವ್ಯಕ್ತಿಗತ ಉಪಾಸನೆಗಾಗಿ ಎಂದು ತಿಳಿಯಲಾಗಿದೆ. ಆದರೆ ಧೀಮಹೀ ಅಂದರೆ ನಾವು ಧ್ಯಾನ ಮಾಡುತ್ತೇವೆ. ಇದು ಬಹುವಚನಿ ಪದ. ಸಮುದಾಯದ ಸೂಚಕ ಅಂದರೆ ಗಾಯತ್ರಿ ಉಪಾಸನೆಯನ್ನು ವ್ಯಕ್ತಿ ಮಾಡುವುದಾಗಿದ್ದರೂ ಕೂಡ ತನ್ನಲ್ಲಿ ಇಡೀ ಸಮುದಾಯದ ಅಂದರೆ ವಿಶ್ವಾತ್ಮದ ಕಲ್ಪನೆ ಮಾಡಿಕೊಂಡು ಮಾಡುವುದಿದೆ. ಧ್ಯಾನಕ್ಕಾಗಿ ಧ್ಯಾನಗಮ್ಯ ವಸ್ತು ಬೇಕು. ಅದಕ್ಕಾಗಿ ಸವಿತಾದ ಹೆಸರನ್ನು ಕೊಡಲಾಯಿತು. ಸವಿತಾ ಶಬ್ದ ದೇವತಾ ವಾಚಕ. ವೇದಗಳಲ್ಲಿ ಶಬ್ದ ರೂಪವನ್ನು ದೇವತೆಯೆಂದು ತಿಳಿಯಲಾಗಿದೆ. ಸವಿತಾ ಎಂದರೆ ಸ್ಥೂಲ ಮೂರ್ತಿ ಸೂರ್ಯ. ಅವನು ಎದುರಿನಲ್ಲಿ ಉದಯಿಸುತ್ತಿದ್ದಾನೆ. ಸವಿತಾ ಒಂದು ಶಬ್ದ ದೇವತೆಯ ರೂಪವಾಗಿ ಇದೆ. ಹೀಗೆಂದು ಶಾಸ್ತ್ರಕಾರರು ಹೇಳುತ್ತಾರೆ. ಸವಿತಾದ ಅರ್ಥ ಪ್ರೇರಣೆಯನ್ನು ಕೊಡುವಂಥವನು. ಆದ್ದರಿಂದ ಪ್ರೇರಣೆಕೊಡುವಂಥ ಭಗವಂತನಲ್ಲಿ ಪ್ರೇರಣೆಗಾಗಿ ಬೇಡಿಕೊಳ್ಳಲಾಗಿದೆ. ಭಗವಂತನದು ಅನೇಕ ಗುಣ. ದಯಾಗುಣವನ್ನು ಬಯಸುವುದಾದಲ್ಲಿ ದಯಾಳು ಭಗವಂತನ ಪ್ರಾರ್ಥನೆ ಮಾಡುವೆವು. ಪ್ರೇಮ ಬೇಕಿದ್ದಲ್ಲಿ ಪ್ರೇಮಮಯ ಭಗವಂತನಲ್ಲಿ ಪ್ರೇಮವನ್ನು ಬೇಡುವೆವು. ಯಾವ ಗುಣವನ್ನು ಪ್ರಾಪ್ತ ಮಾಡಿಕೊಳ್ಳಬೇಕಿದೆಯೋ ಆ ಗುಣವುಳ್ಳ ಪರಮೇಶ್ವರನ ಪ್ರಾರ್ಥನೆ ಮಾಡುತ್ತಾರೆ. ಪರಮಾತ್ಮನಿಗೆ ಅನೇಕ ಗುಣಗಳಿವೆ. ಆದರೆ ಧ್ಯಾನಕ್ಕಾಗಿ ವಿಶೇಷ ಗುಣವೇ ಇರಬೇಕಾಗುತ್ತದೆ. ಯಾವ ಗುಣದ ಇಚ್ಛೆಯಿದೆಯೋ ಆ ಗುಣದ ಧ್ಯಾನ ನಡೆಯುತ್ತದೆ. ಯಾವ ಭಗವಂತನ ಧ್ಯಾನ ಮಾಡುತ್ತೇವೆಯೋ ಆ ಗುಣವನ್ನು ನಾವು ಪ್ರಾಪ್ತ ಮಾಡಿಕೊಳ್ಳಬೇಕು. ಆದ್ದರಿಂದ ಆ ಗುಣವುಳ್ಳ ಭಗವಂತನ ಧ್ಯಾನವನ್ನು ನಾವು ಮಾಡುತ್ತೇವೆ. ಗುಣ ಪ್ರಾಪ್ತಿಯೇ ಭಕ್ತಿ ಸ್ವರೂಪ. ದೇವರ ಸ್ಮರಣೆಯಿಲ್ಲದೆಯೇ ಗುಣ ಪ್ರಾಪ್ತಿಗಾಗಿ ಪ್ರಯತ್ನಿಸಿದಲ್ಲಿ ಅದು ಕೂಡ ಭಕ್ತಿಯೇ. ಆದರೆ ಭಗವಂತನ ನೆರವಿನಿಂದ ಗುಣ ಪ್ರಾಪ್ತಿ ಸುಲಭವಾಗಿ ಸಿದ್ಧಿಸುತ್ತದೆ. ಆದ್ದರಿಂದ ಭಗವಂತನ ಹೆಸರಿನೊಂದಿಗೆ ಆ ಪ್ರಯಾಸವನ್ನು ಮಾಡಲಾಗುತ್ತದೆ.ಧ್ಯಾನ

ಮಾಡುವುದಕ್ಕೋಸ್ಕರ ಭಗವಂತನ ಯಾವುದಾದರೊಂದು ರೂಪ ಬೇಕು, ಆಕಾರ ಬೇಕು, ಸಗುಣ ಸಾಕಾರ ಬೇಕು ಆದ್ದರಿಂದ ***ಸವಿತುರ್ ವರೇಣ್ಯಂ ಭರ್ಗೋ ದೇವಸ್ಯ*** ಎಂದು ಹೇಳಲಾಗಿದೆ. ಸೂರ್ಯನ ತೇಜಸ್ಸನ್ನು ನಾವು ಧ್ಯಾನ ಮಾಡುತ್ತೇವೆ. ಭರ್ಗ ಶಬ್ದ ತೇಜವಾಚಕ. ಅದರ ವಿಶೇಷ ಅರ್ಥ ದಾಹಕ ತೇಜ. ಭಸ್ಮ ಮಾಡುವಂಥದು. ಅಂದರೆ ನಮ್ಮಲ್ಲಿರುವಂಥ ದೋಷಗಳನ್ನು ಸುಟ್ಟು ಹಾಕುವ ಆ ತೇಜ. ಪ್ರೇರಣೆ ಕೊಡುವಂಥ ಭಗವಂತನ ಮತ್ತು ಅವನ ದಾಹಕ ತೇಜಸ್ಸಿನ, ಶೋಧಕ ತೇಜಸ್ಸಿನ, ಮಲ ಮತ್ತ ಪಾಪವನ್ನು ದಹಿಸುವ ಅವನ ತೇಜಸ್ಸನ್ನು ನಾವು ಧ್ಯಾನಿಸುತ್ತೇವೆ. ಅದರಲ್ಲಿ ತೇಜಸ್ಸಿನೊಂದಿಗೆ ಒಂದು ವಿಶೇಷಣವನ್ನು, ***ವರೇಣ್ಯಂ*** ಜೋಡಿಸಲಾಗಿದೆ. ***ವರೇಣ್ಯಂ*** ಅಂದರೆ ಯಾವುದು ಕಮನೀಯವೋ ವರ್ಣೀಯವೋ ಅದು. ಆಕಾಂಕ್ಷೆಯನ್ನು ಹುಟ್ಟಿಸುವ ತೇಜಸ್ಸನ್ನು ನಾವು ಧರಿಸುತ್ತೇವೆ. ಆಗ ಅದು ನಮಗೆ ಪ್ರಾಪ್ತವಾಗುತ್ತದೆ. ಇಲ್ಲಿ ನಾವು ಮಾಡಬೇಕಾದ ಒಂದು ಕರ್ತವ್ಯವನ್ನು ತಿಳಿಸಲಾಗಿದೆ. ನೀವು ತೇಜಸ್ ಧರಿಸಿದರೆ ಅದು ನಿಮ್ಮನ್ನು ಧರಿಸುತ್ತದೆ. ಅಂದರೆ ಆ ತೇಜಸ್ ನಿಮಗೆ ಪ್ರಾಪ್ತವಾಗುವುದು. ನಿಮ್ಮ ಭೂಮಿಕೆ ಕರ್ತನದು. ಅಂದರೆ ನಿಮ್ಮ ಮೇಲೆ ಅದು ಆಕ್ರಮಣ ಮಾಡುವುದಿಲ್ಲ. ನೀವು ಧರಿಸುವುದರಿಂದ ಅದು ನಿಮಗೆ ಪ್ರಾಪ್ತವಾಗುತ್ತದೆ. ಆದ್ದರಿಂದ ಭಕ್ತಿಯಲ್ಲಿ ಕೂಡ ಭಕ್ತನ ಜವಾಬ್ದಾರಿ ಧರಿಸುವುದೇ ಆಗಿರುತ್ತದೆ. ಯಾವ ರೀತಿ ಶ್ರೀಕೃಷ್ಣನಿಗೆ ರುಕ್ಮಿಣಿ ಪತ್ರ ಬರೆದು ವಶಮಾಡಿಕೊಂಡಳೊ ಆ ರೀತಿ. ಅವಳು ಧರಿಸದೆ ಹೋಗಿದ್ದರೆ ಶ್ರೀಕೃಷ್ಣ ಪರಮಾತ್ಮ ಅವಳ ಮೇಲೆ ಅನುಗ್ರಹ ಮಾಡುವಂಥವನಾಗಿರಲಿಲ್ಲ. ಅದೇ ರೀತಿ ನಾವು ತೇಜಸ್ಸನ್ನು ಧರಿಸಿದಾಗಲೇ ಆ ತೇಜಸ್ ತನ್ನ ಕಾರ್ಯ ಮಾಡುತ್ತದೆ. ಅದರ ಕಾರ್ಯ ಮಲದ ದಹನ. ನಾವು ತೇಜಸ್ಸನ್ನು ಧರಿಸ ಬಯಸದೇ ಮಲದಹನವನ್ನು ಬಯಸದೆ ಇದ್ದರೂ ಕೂಡ ಅದು ದಹನ ಮಾಡಿದರೆ ನಾವು ಭೀತಿಗೊಳ್ಳುವೆವು ಮತ್ತು ನಮಗೆ ಆ ಕ್ರಿಯೆ ಸರಿ ಎನಿಸುವುದಿಲ್ಲ ಉದಾಹರಣೆಗೆ ಕರುಣಾಮಯಿಯಾದ ಗಂಗೆ ಹರಿಯುತ್ತಿದ್ದಾಳೆ. ನಾವು ಅವಳ ಉಪಯೋಗ ಮಾಡಲು ಬಯಸುತ್ತೇವೆ. ಆದರೆ ಅತಿಯಾದ ಕರುಣೆಯಿಂದ ಮತ್ತು ಪ್ರೇಮದಿಂದ ಗಂಗೆ ಒಂದು ವೇಳೆ ಮನೆಮನೆಗೆ ಹೋಗಲಾರಂಭಿಸಿದರೆ ಜನರು ಭಯಗೊಳ್ಳುವರು, ಮನೆ ಬಿಟ್ಟು ಓಡಿ ಹೋಗುವರು. ಆದ್ದರಿಂದ ಅವಳು ಆಕ್ರಮಣ ಮಾಡುವುದಿಲ್ಲ. ಅದೇ ರೀತಿ ಭಗವಂತನ ತೇಜಸ್ ನಮ್ಮ ವರೆಗೆ ತಲುಪಿದ್ದಲ್ಲಿ ನಾವು ಭಯಗೊಳ್ಳುವೆವು. ನಮ್ಮ ಕೆಲಸವಾಗುವುದಿಲ್ಲ. ಭಗವಂತ ಆಕ್ರಮಣ ಮಾಡುವುದಿಲ್ಲ. ಆದ್ದರಿಂದ ಭಗವಂತ ಹೇಳಿದ, ನೀನು ಧರಿಸು, ನಾನು ಬರುವೆ. ನೀನೆಷ್ಟು ಅಂಶ ಧರಿಸುವೆಯೋ ಅಷ್ಟು ಅಂಶದಲ್ಲಿ ನಾನು ಬರುವೆ. ಎಷ್ಟು ಆಕಾಂಕ್ಷೆಯಿದೆಯೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಾನು ಬರುವುದಿಲ್ಲ. ಕಡಿಮೆ ಪ್ರಮಾಣದಲ್ಲಿಯೂ ಬರುವುದಿಲ್ಲ. ಆದ್ದರಿಂದ ***ವರೇಣ್ಯಂ*** ಎಂದು ಹೇಳಿದೆ. ಅದರ ಅರ್ಥ ವರ್ಣೀಯ ಪ್ರಭು.

ತತ್ದ ಅರ್ಥ ಉನ್ನತ, ಅಲಿಪ್ತ, ನಮ್ಮಿಂದ ದೂರ. ಸೂರ್ಯನಾರಾಯಣನ

ಉದಯವಾಗುತ್ತಿದೆ. ಆ ಸಮಯದಲ್ಲಿ ಗಾಯತ್ರಿ ಮಂತ್ರವನ್ನು ಹೇಳಲಾಗುತ್ತದೆ. ಬೇರೆ ಸಮಯದಲ್ಲಿಯೂ ಕೂಡ ಗಾಯತ್ರಿ ಮಂತ್ರವನ್ನು ಹೇಳಲಾಗುತ್ತದೆ. ಬೇರೆ ಸಮಯದಲ್ಲಿಯೂ ಕೂಡ ಗಾಯತ್ರಿ ಮಂತ್ರವನ್ನು ಹೇಳಬಹುದು. ಅದಕ್ಕೆ ಸಮಯದ ನಿರ್ಬಂಧವಿಲ್ಲ. ಸೂರ್ಯ ತೇಜ ಬೆಳೆಯುತ್ತಿದೆ. ಆಗ ಅದರ ಧಾರಣೆ ಮಾಡುವುದಿದೆ. ಸೂರ್ಯನ ಕಿರಣ ಬರುವಲ್ಲಿ ಒಂದು ಕ್ಷಣದಲ್ಲಿ ಲಕ್ಷಾಂತರ ಜಂತುಗಳ ಸಂಹಾರವಾಗುತ್ತದೆ. ಎದುರಿನಲ್ಲಿ ಅವನು ಉದಯಿಸುತ್ತಿದ್ದಾನೆ ಮತ್ತು ನಾವು ಇಲ್ಲಿ ನಿಂತಿದ್ದೇವೆ.

ದೇವಸ್ಯ ದೇವ ಶಬ್ದದ ಅರ್ಥ "ಕೊಡುವುದಕ್ಕಾಗಿ ಕುಳಿತಿದ್ದೇನೆ" ನಾವು ಧರಿಸ ಬೇಕು. ಅವರು ಕೊಡುವುದಕ್ಕಾಗಿ ಸಿದ್ಧರಿದ್ದಾರೆ. ಅವರು ದೇವವಾದ್ದರಿಂದ ಜಿಪುಣರಲ್ಲ. ಆಕ್ರಮಣಕಾರಿ ಕೂಡ ಅಲ್ಲ. ದಾಳಿ ಮಾಡುವುದಿಲ್ಲ. ಅವರು ಕೊಡಲು ಕುಳಿತಿದ್ದಾರೆ. ನಮಗೆ ಸ್ವಾಭಾವಿಕವಾಗಿ ಸ್ಫೂರ್ತಿ ಬರುತ್ತದೆ. ನಾವು ಕೇಳುತ್ತೇವೆ ಅವರ ಪರವಾಗಿ ನಮ್ಮ ಧಾರಣೆಯಾಗಿದೆ. ಆದ್ದರಿಂದ ನಾವೂ ಕೂಡ ಕೇಳಿಕೊಳ್ಳೋಣ. ಕೇವಲ ನಮ್ಮ ಮೇಲೆಯೇ ಭಾರ ಹಾಕಿದ್ದಾರೆ ಎಂದೇನಲ್ಲ. ತಾವು ಉತ್ಸುಕತೆಯಿಂದ ಕೊಡಲು ಕುಳಿತಿರುವುದಾಗಿ ಅವರು ಹೇಳುತ್ತಾರೆ. ಪ್ರಭು ದೇವನಿದ್ದಾನೆ. ಕೊಡುವುದಕ್ಕಾಗಿ ಸಿದ್ಧನಿದ್ದಾನೆ ಮತ್ತು ಎದಿರು ನೋಡುತ್ತಾನೆ. ಭಗವಾನ್ ಸೂರ್ಯನಾರಾಯಣನು ನಿಮ್ಮ ಬಾಗಿಲು ತೆಗೆದಿದ್ದರೆ ಒಳಗೆ ಬರುತ್ತಾನೆ. ನೀವೆಷ್ಟು ತೆಗೆದಿರುತ್ತೀರೋ ಅಷ್ಟು ಒಳಗೆ ಬರುತ್ತಾನೆ ತಳ್ಳಿಕೊಂಡು ಒಳಗೆ ಬರುವುದಿಲ್ಲ. ಹೊರಗಡೆ ನಿಂತಿದ್ದಾನೆ "ತೆಗೆ ಮತ್ತು ತೆಗೆದುಕೋ ನಿನ್ನ ಸೇವೆಯಲ್ಲಿ ಉಪಸ್ಥಿತನಿದ್ದೇನೆ". ಕೆಲ ಜನರು ಬೇಗನೆ ಬೇಗನೆ ಏಳುತ್ತಾರೆ. ಕೆಲವರು ನಾಲ್ಕು ಗಂಟೆಗೆ, ಕೆಲವರು ಆರು ಗಂಟೆಗೆ, ಕೆಲವರು ಸೂರ್ಯೋದಯದ ನಂತರ, ಕೆಲವರು ಎಂಟು ಗಂಟೆಗೆ, ತಡವಾಗಿ ಏಳಬಹುದು ಆದರೆ ಎದ್ದೇ ಏಳುತ್ತಾರೆ. ಬಗವಂತ ಸ್ವಯಂ ನಿಂತಿದ್ದಾನೆ ಆಗ ಪ್ರತಿಯೊಬ್ಬರೂ ಎದ್ದೇಳುತ್ತಾರೆ. ಹೀಗೆ ಭಗವಂತ ಅಲಿಪ್ತನಾಗಿದ್ದಾನೆ ಆದರೆ ವ್ಯಾಪಕನಿದ್ದಾನೆ.

ಸೂರ್ಯನನ್ನು ಧರಿಸುವ ಹೊಣೆಗಾರಿಕೆ ನಿಮ್ಮಲ್ಲಿದೆ. ಅವನ ತೇಜಸ್ಸು ದಾಹಕವಾಗಿದೆ. ಆದ್ದರಿಂದ ಮಲದ ದಹನ ಅವಶ್ಯವಾಗಿ ಆಗುತ್ತದೆ. ಗಾಯತ್ರಿಯಾದಿ ಮಂತ್ರಗಳು ಉಪಾಂಶು ಜಪವಿಹಿತವಾಗಿದೆ. ಮೌನವು ಅಲ್ಲ ಮತ್ತು ಮಾತು ಕೇಳಿಬರುವಷ್ಟು ಸ್ಪಷ್ಟವೂ ಇಲ್ಲ. ಇದು ಉಪಾಂಶು. ಅದರ ಉಚ್ಚಾರಣೆಯನ್ನು ಗಟ್ಟಿಯಾಗಿ ಮಾಡಲಾಗುವುದಿಲ್ಲ. ಈ ಮಂತ್ರವನ್ನು ಮೆಲು ಧ್ವನಿಯಲ್ಲಿ ಮನಸ್ಸಿನಲ್ಲಿಯೇ ತನಗೆ ತಾನೇ ಹೇಳಿಕೊಳ್ಳುವಂತೆ ಜಪ ಮಾಡಬೇಕಾಗುತ್ತದೆ. ಅಧೋಮಿಲಿತ ದೃಷ್ಟಿಯ ಉದ್ದೇಶವೇ ಈ ಉಪಾಂಶು ಜಪದ ಉದ್ದೇಶ.

(ಗಾಯತ್ರಿ ಮಂತ್ರದ ಪರಿಚಯ ಇಲ್ಲಿಗೆ ಮುಕ್ತಾಯ. ವೇದದಲ್ಲಿಯ ಇತರ ಮಂತ್ರಗಳ ಪರಿಚಯ ಮುಂದುವರಿಯುತ್ತದೆ.)

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಕೈದಿಗಳ ಕಥನ**
ಲೇಖಕರ ಹೆಸರು : ಗಣೇಶ ಅಮೀನಗಡ
ಪ್ರಕಾಶಕರು : ನಾಕುತಂತಿ ಪ್ರಕಾಶನ, ಬೆಂಗಳೂರು – ೭೦
ಬೆಲೆ ರೂ: ೫೦ : ಪುಟಗಳು : ೯೪

ಜೈಲಿನ ಗೋಡೆ ಮತ್ತು ಕಂಬಿಗಳ ಹಿಂದೆ ಇರುವ ವ್ಯಕ್ತಿಗಳ ನೋವನ್ನು ಮತ್ತು ಅವರು ಏಕೆ ಬಂಧಿಗಳಾದರು ಎಂಬುದನ್ನು ಕೈದಿಗಳ ಕಥನದ ಮೂಲಕವೇ ತಿಳಿಸುವ ರೋಚಕ ಪುಸ್ತಕವಿದು. ಅಲ್ಲದೆ ಕೈದಿಗಳಿಗೆ ರಂಗ ತರಬೇತಿ ನೀಡಿ ಅವರಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿದ ಹುಲಿಗೆಪ್ಪ ಕಟ್ಟಿಮನಿಯವರ ಹತ್ತು ವರ್ಷಗಳ ಪ್ರಯತ್ನದ ಫಲವನ್ನು ಈ ಪುಸ್ತಕದಲ್ಲಿ ಕಾಣಬಹುದು. ಜೈಲುಗಳನ್ನು ಬಂಧಿಖಾನೆ ಅನ್ನುವ ಬದಲು ಪರಿವರ್ತನ ಶಿಬಿರ ಎಂದು ಕರೆಯಬೇಕೆನ್ನುವ ಕಾಲ ಬೇಗನೆ ಬರಲೆಂದು ಹಾರೈಸುವ ವ್ಯಕ್ತಿಗಳಿಗೆ ಈ ಪುಸ್ತಕ ಚೇತೋಹಾರಿಯಾಗಿದೆ. ಪತ್ರಕರ್ತರಾದ ಗಣೇಶ ಅಮೀನಗಡರವರು ಈ ಕೃತಿಗಾಗಿ ಅಭಿನಂದನಾರ್ಹರಾಗಿದ್ದಾರೆ.

* * *

ಪುಸ್ತಕದ ಹೆಸರು : **ಕಾಸರಗೋಡು ಜನರ ಬವಣೆ**
ಲೇಖಕರ ಹೆಸರು : ಎಂ. ಎಸ್. ವೆಂಕಟರಾಮಯ್ಯ
ಪ್ರಕಾಶಕರು : ಬಿಝ್ ಬಝ್ ೨, ೧ನೇ ತಿರುವು, ಕಾಳಿದಾಸ ಬಡಾವಣೆ, ಶ್ರೀನಗರ, ಬೆಂಗಳೂರು – ೫೦
ಬೆಲೆ ರೂ: ೬೦ : ಪುಟಗಳು : ೭೯ + ೧ = ೮೦

ಕರ್ನಾಟಕ ರಾಜ್ಯ ಸ್ಥಾಪನೆಯ ಶಾಪ ಕಾಸರಗೋಡಿಗೆ ತಲುಪಿತು. ಇಂದಿನ ರಾಜಕೀಯ ಪರಿಸ್ಥಿತಿಯನ್ನು ನೋಡಿದರೆ ಕಾಸರಗೋಡು ಶಾಶ್ವತವಾಗಿ ಕನ್ನಡಿಗರ ಕೈ ಬಿಟ್ಟಂತೆಯೆ ಎಂದು ಅನಿಸುತ್ತದೆ. ಕಾಸರಗೋಡನ್ನು ಕರ್ನಾಟಕಕ್ಕೆ ಮರಳಿ ಪಡೆಯುವ ಪ್ರಯತ್ನದ ದಾರಿ ಸುಗಮವೇನಲ್ಲಾ. ಏಕೆಂದರೆ ಕಾಸರಗೋಡಿನ ಸಮಸ್ಯೆ ಪರೋಕ್ಷವಾಗಿ ಬೆಳಗಾವಿ ಸಮಸ್ಯೆಯೊಂದಿಗೆ ತಳಕು ಹಾಕಿ ಕೊಂಡಿದೆ. ಕೇಂದ್ರ ಸರ್ಕಾರವು ಈ ವಿಷಯದಲ್ಲಿ ಮೌನವಾಗಿದೆ. ಪ್ರಚಂಡ ಹೋರಾಟ ನಡೆದಾಗಲೆ ಕೇಂದ್ರ ಸರ್ಕಾರ ಕಣ್ಣು ಬಿಡುತ್ತದೆ. ಅಂತ ಪ್ರಚಂಡ ಹೋರಾಟವನ್ನು ನಡೆಸುವ ಸಾಮರ್ಥ್ಯ ಕಾಸರಗೋಡಿನ

ಕನ್ನಡಿಗರಲ್ಲಿ ಇಲ್ಲ. ಇನ್ನು ಉಳಿದ ಕನ್ನಡಿಗರಿಗೆ ಕಾಲಕ್ರಮೇಣ ಕಾಸರಗೋಡು ಮರೆತು ಹೋಗುತ್ತಿದೆ. ಇಂಥ ಅಂಧಕಾರದ ಪರಿಸ್ಥಿತಿಯಲ್ಲೂ ಕಾಸರಗೋಡಿನಲ್ಲಿ ಆಗಾಗ್ಗೆ ಕನ್ನಡ ಪರ ಧ್ವನಿ ಕೇಳುವುದು ಕೊಂಚ ಸಮಾಧಾನದ ಸಂಗತಿಯಾದರೂ ಅದರಿಂದ ಯಾವ ಪರಿಹಾರ ದೊರೆಯಲಾರದು ಕಾಸರಗೋಡಿನಲ್ಲಿಯ ಕನ್ನಡಿಗರ ಬವಣೆಯನ್ನು ತಿಳಿಯುವಂಥ ಪ್ರಯತ್ನವನ್ನಾದರೂ ಕನ್ನಡಿಗರು ಮಾಡಿಕೊಳ್ಳದೆ ಹೋದರೆ ಅದಕ್ಕಿಂತ ಕೃತಘ್ನತೆಯ ವಿಷಯ ಬೇರೊಂದು ಇರಲಾರದು. ಕನ್ನಡಿಗರಿಗೆ ಕಾಸರಗೋಡಿನ ಜನರ ಬವಣೆಯನ್ನು ಈ ಪುಸ್ತಕದ ಲೇಖಕರು ಬಹಳ ಪರಿಣಾಮಕಾರಿಯಾಗಿ ಮಾಡಿ ಕೊಟ್ಟಿದ್ದಾರೆ. ಪ್ರತಿಯೊಬ್ಬ ಕನ್ನಡಿಗರು ಈ ಪುಸ್ತಕವನ್ನು ಓದಬೇಕಾದದು ಧರ್ಮವೆಂದು ಭಾವಿಸಬೇಕು.

* * *

ಪುಸ್ತಕದ ಹೆಸರು	:	**ಬಯಲಿಂದ ಬಯಲಿಗೆ** (ಕವನ ಸಂಕಲನ)
ಲೇಖಕರ ಹೆಸರು	:	ಎಂ. ಎಸ್. ವೆಂಕಟರಾಮಯ್ಯ
ಪ್ರಕಾಶಕರು	:	ಬಿರ್ಝ್ ಬರ್ಝ್ ೨, ೧ನೇ ತಿರುವು, ಕಾಳಿದಾಸ ಬಡಾವಣೆ, ಶ್ರೀನಗರ, ಬೆಂಗಳೂರು – ೫೦
ಬೆಲೆ ರೂ: ೫೦	:	ಪುಟಗಳು : ೭೩

ಇದು ಕವಿಗಳ ಮೂರನೆಯ ಕವನ ಸಂಕಲನ. ಈ ಪುಸ್ತಕದಲ್ಲಿ ೪೨ ಕವನಗಳಿವೆ. ಎಲ್ಲಾ ಕವನಗಳು ಇಂದಿನ ಬದುಕಿನ ಸಂಕೀರ್ಣತೆಯನ್ನು ಗಮನದಲ್ಲಿರಿಸಿಕೊಂಡು ಬರೆದಂಥವುಗಳಾಗಿವೆ. ಕೆಲ ಕವನಗಳು ಪ್ರಕೃತಿಯನ್ನು ತಮ್ಮ ವಿಷಯವನ್ನಾಗಿರಿಸಕೊಂಡಿದ್ದರೆ, ಇನ್ನೂ ಕೆಲವು ಜೀವನದ ಏರಿಳಿತ ಕುರಿತು ಇವೆ.

* * *

ಪುಸ್ತಕದ ಹೆಸರು	:	**ಅಂತರಗ್ರಹ ಅಭಿಯಾನಗಳು**
ಪ್ರಕಾಶಕರು	:	ಇಸ್ರೋ ಉಪಗ್ರಹ ಕೇಂದ್ರ, ವಿಮಾನಪುರ ಅಂಚೆ ಬೆಂಗಳೂರು – ೧೭
ಬೆಲೆ ರೂ: --	:	ಪುಟಗಳು : ೧೨೯

ಬೆಂಗಳೂರಿನಲ್ಲಿರುವ ಇಸ್ರೋ ಉಪಗ್ರಹ ಕೇಂದ್ರವು ರಾಜ್ಯೋತ್ಸವ ಸಮಿತಿಯನ್ನು ರಚಿಸಿಕೊಂಡಿದೆ. ಕ್ಲಿಷ್ಟ ತಾಂತ್ರಿಕ ವಿಷಯಗಳನ್ನು ಜನಸಾಮಾನ್ಯರೆಡೆಗೆ ಒಯ್ಯುವ ಉದ್ದೇಶದಿಂದ ಪ್ರತಿವರ್ಷ ಕನ್ನಡ ತಾಂತ್ರಿಕ ಕಮ್ಮಟವನ್ನು ನಡೆಸಿಕೊಂಡು ಬರುತ್ತಿದೆ. ಈ ಕಮ್ಮಟದಲ್ಲಿ ಇಸ್ರೋ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಭಾಷಾ

ತಂತ್ರಜ್ಞಾನಿಗಳು ಬಾಹ್ಯಾಕಾಶ ಮತ್ತು ಬಾಹ್ಯಾಕಾಶ ಪ್ರಯಾಣ ಕುರಿತು ಲೇಖನಗಳನ್ನು ಕಮ್ಮಟದಲ್ಲಿ ಮಂಡಿಸುತ್ತಾರೆ. ಮುಂದೆ ಈ ಲೇಖನಗಳನ್ನು ಸಂಗ್ರಹಿಸಿ ಸಂಪುಟವನ್ನು ಹೊರತರುತ್ತಾರೆ. ಇಂಥ ಕಮ್ಮಟವನ್ನು ೨೦೦೩ನೇ ಇಸವಿಯಿಂದ ನಡೆಸಿಕೊಂಡು ಬರಲಾಗುತ್ತಿದೆ. ಈ ಸಂಪುಟ ಕಮ್ಮಟದ ಆರನೇ ವರ್ಷದ ಫಲವಾಗಿ ಹೊರಬಂದಿದೆ. ಈ ಗ್ರಂಥದ ಸಂಪಾದಕರು ಶ್ರೀ ಬಿ.ಎನ್.ಬಾಳಿಗರವರು. ಇವರಲ್ಲದೆ ಇನ್ನೂ ಎಂಟು ಜನರು ಸಂಪಾದಕ ಮಂಡಳಿಯಲ್ಲಿದ್ದಾರೆ. ಅಲ್ಲದೆ ಹತ್ತು ಜನರ ಕಾರ್ಯಕಾರಿ ಸಮಿತಿ ಇದೆ. ಪ್ರಸ್ತುತ ಸಂಪುಟದಲ್ಲಿ ಮಂಗಳಗ್ರಹದತ್ತ ಮಾನವನ ಯಾನಕ್ಕೆ ಸಂಬಂಧಿಸಿದಂತೆ ಹದಿನಾರು ಲೇಖನಗಳಿವೆ. ಬಹಳಷ್ಟು ಚಿತ್ರಗಳು ಮತ್ತು ರೇಖಾ ಚಿತ್ರಗಳಿವೆ. ಈ ಸಂಪುಟವು ಕನ್ನಡ ಭಾಷೆಯಲ್ಲಿ ಬಾಹ್ಯಾಕಾಶದ ವಿಷಯವನ್ನು ತಿಳಿಯಲು ತುಂಬ ಉಪಯುಕ್ತವಾಗಿದೆ. ಇಸ್ರೋ ಸಂಸ್ಥೆಯು ಕನ್ನಡದಲ್ಲಿ ಇಂಥ ಶಾಸ್ತ್ರೀಯ ಪುಸ್ತಕಗಳನ್ನು ಪ್ರಕಟಿಸಿರುವುದು ತುಂಬ ಅಭಿನಂದನೀಯವಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯೋತ್ಸವ ಸಮಿತಿಯನ್ನು ಕೂಡ ಅದರ ಪರಿಶ್ರಮಕ್ಕಾಗಿ ಅಭಿನಂದಿಸಲೇ ಬೇಕು.

* * *

ಸಾದರ ಸ್ವೀಕಾರ

ಪುಸ್ತಕಮನೆ ಸಾಮಾಜಿಕ, ಸಾಂಸ್ಕೃತಿಕ ಬೆಳೆ – ತಿಂಗಳ ಪತ್ರಿಕೆ

ಸಂಪಾದಕ	:	ಹರಿಹರಪ್ರಿಯ
ಬಿಡಿಪ್ರತಿ	:	೩೦ ರೂ
ವಾರ್ಷಿಕ ಚಂದಾ	:	೨೫೦ ರೂ
ವಿಳಾಸ	:	೭೦೨, ಬಿ.ಸಿ.ಸಿ.ಹೆಚ್.ಎಸ್. ಬಡಾವಣೆ ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು – ೬೨

* * *

ಮಂಗಳ ಗ್ರಹದ ಮೇಲೆ ನಾವಿಳಿಯಲು ಇನ್ನೆಷ್ಟು ದಿನ?

– ಸುಧೀಂದ್ರ ಹಾಲ್ದೊಡ್ಡೇರಿ

ಈ ಸೂರ್ಯನ ಸಂಸಾರದಲ್ಲಿ ಭೂಮಿಯ ಮೇಲೆ ಮಾತ್ರ ಜೀವಿಗಳಿರಬೇಕೆ? ಉಳಿದ ಗ್ರಹಗಳಲ್ಲೂ ಇರಬಾರದೇಕೆ? ಎಂಬಂಥ ಪ್ರಶ್ನೆಗಳಿಗೆ ಮಾನವ ಉತ್ತರ ಹುಡುಕುತ್ತಲೇ ಇದ್ದಾನೆ. ವಿಶಾಲವಾದ ಜೋಳದ ಹೊಲದಲ್ಲಿ ಒಂದೇ ಒಂದು ಗಿಡದಲ್ಲಿ ಮಾತ್ರ ತೆನೆ ಬಿಟ್ಟಿದೆಯೆಂದರೆ ನಂಬುವುದಾದರೂ ಹೇಗೆ? ಅದೇ ರೀತಿ, ಅನಂತ ವಿಶ್ವದಲ್ಲಿ ನಮ್ಮ ನೆಲ ಮಾತ್ರ ಜೀವಂತವೆಂಬ ನಂಬಿಕೆ ಹುಂಬತನವೆಂದಿದ್ದ ಗ್ರೀಕ್ ತತ್ವಜ್ಞಾನಿ ಮೆಟ್ರೋಡೋರಸ್, ೨೦೦೦ ವರ್ಷಗಳ ಹಿಂದೆ. ಬೆಳಕೇ ಬೀಳದ ಪಾತಾಳ ಗವಿಗಳಲ್ಲಿ, ಉರಿಬಿಸಿಲಿನ ಮರಳುಗಾಡಿನಲ್ಲಿ, ಆಮ್ಲೀಯ ವಾತಾವರಣದಲ್ಲಿ, ಕೊರೆಯುವ ಚಳಿ ಪ್ರದೇಶದಲ್ಲಿ ಸೂಕ್ಷ್ಮ ಜೀವಿಗಳಿರುವಾಗ, ಮಂಗಳನೋ ಅಥವಾ ಮತ್ತೊಂದು ಗ್ರಹದಲ್ಲಿ ಜೀವ ಕಣ ಏಕಿರಬಾರದು ಎಂಬ ಪ್ರಶ್ನೆ ಕೇವಲ ಜೀವ ವಿಜ್ಞಾನಿಗಳದ್ದಲ್ಲ, ನಮ್ಮೆಲ್ಲರದು.

ಹದಿನೇಳನೇ ಶತಮಾನದಲ್ಲಿ 'ವಿಶ್ವದ ಎಷ್ಟೋ ಕಡೆ ಜೀವಿಗಳಿದ್ದಾರೆ' ಎಂಬ ಹೇಳಿಕೆಗಾಗಿ 'ಜಿಯೋರ್ಡನೋ ಬ್ರುನೋ'ನನ್ನು ಸಂಪ್ರದಾಯವಾದಿಗಳು ಜೀವಂತವಾಗಿ ಸುಟ್ಟುಹಾಕಿದ್ದರು. ಇಂಥ ಪ್ರತಿರೋಧಗಳನ್ನು ಲೆಕ್ಕಿಸದ ಕ್ರಿಶ್ಚಿಯನ್ ಹ್ಯುಜೆನ್ಸ್ ಎಂಬ ಖಗೋಳವಿಜ್ಞಾನಿ ಪರಲೋಕದ ಜೀವಿಗಳಿಗೆ ನಮ್ಮಂತೆಯೇ ಕೈಗಳೂ ಇರಬಹುದೆಂದು ಪ್ರತಿಪಾದಿಸಿದ್ದ. ಈ ಎಲ್ಲ ನಂಬಿಕೆಗಳಿಗೆ ಪುಷ್ಟಿ ಕೊಡುವ ಯತ್ನವನ್ನು ಮಾಡಿದ ಕೀರ್ತಿ ಇಟಲಿಯ ಖಗೋಳಜ್ಞ 'ಜಿಯೊವನ್ನಿ ಶಿಯಪರೆಲ್ಲಿ'ಯದು. ೧೮೭೭ರಲ್ಲಿ ಈತ ನಡೆಸಿದ ಸಂಶೋಧನೆಯ ಪ್ರಕಾರ ಮಂಗಳನ ಮೇಲೆ ನಾಲೆಗಳಿದ್ದವು. ಅಮೇರಿಕದಲ್ಲಿದ್ದ ಪರ್ಸಿವಲ್ ರೋವೆಲ್ ಮತ್ತಿತರರು ಈ ನಂಬಿಕೆಗಳನ್ನು ದೃಢೀಕರಿಸಲು ಪ್ರಯತ್ನಿಸಿದರು. ಇದಕ್ಕಾಗಿ ಅರಿಝೋನಾದ ಗ್ರಾಂಡ್ ಕ್ಯಾನ್ಯನ್ ಬಳಿಯ ಫ್ಲಾಗ್‌ಸ್ಟಾಫ್‌ನಲ್ಲಿ ಲೊವೆಲ್ ದೂರದರ್ಶಕವೊಂದನ್ನು ಸ್ಥಾಪಿಸಿದ. ಇವನ ಕಣ್ಣಿಗೆ ಮಂಗಳನ ಮೇಲೆ ನೂರಾರು ಕಾಲುವೆಗಳು 'ಕಂಡವು'. ಇದ್ಯಾವುದೂ ನೈಸರ್ಗಿಕವಾಗಿ ನಿರ್ಮಾಣವಾದವುಗಳಲ್ಲ, ಅತ್ಯುನ್ನತ ಮಟ್ಟದ ಈ ಎಂಜನೀರಿಂಗ್ ಕೌಶಲದ ಹಿಂದೆ ಮಾನವನಿಗಿಂತಲೂ ಬುದ್ಧಿವಂತರಾಗಿರುವ ಮಂಗಳ 'ಜೀವಿ'ಗಳಿದ್ದಾರೆಂಬ ಅವನ ಹೇಳಿಕೆ ವೈಜ್ಞಾನಿಕ ವಲಯಗಳಲ್ಲಿ ಚರ್ಚೆಗೆ ದಾರಿಮಾಡಿಕೊಟ್ಟಿತು. ಈ ಕಾಲ್ಪನಿ'ಕತೆ'ಯನ್ನು ಆಧಾರವಾಗಿಟ್ಟುಕೊಂಡು ವಿಜ್ಞಾನ ಬರಹಗಾರ ಹೆಚ್.ಜಿ.ವೆಲ್ಸ್ ತನ್ನ 'ದಿ ವಾರ್ ಆಫ್ ದಿ ವರ್ಲ್ಡ್' ಎಂಬ ಕಾದಂಬರಿಯಲ್ಲಿ ಮಂಗಳ ಜೀವಿಗಳು ಮರಣಾಂತಿಕ ಸುಡುಕಿರಣ ಸಲಾಕೆಗಳೊಂದಿಗೆ ಭೂಮಿಗೆ ದಂಡೆತ್ತಿ ಬಂದಂತೆ ಚಿತ್ರಿಸಿದ್ದ.

ಶಕ್ತಶಾಲಿ ದೂರದರ್ಶಕಗಳು (ಟೆಲಿಸ್ಕೋಪ್) ಆವಿಷ್ಕಾರವಾದಂತೆ, ಮಂಗಳನಲ್ಲಿ ಕಂಡ 'ನಾಲೆ'ಗಳೆಲ್ಲ ಹೇಳ ಹೆಸರಿಲ್ಲದಂತೆ ಮಾಯವಾದವು! ನಾಲೆಗಳಿಗೇ ನೆಲೆಯಿಲ್ಲದ ಮೇಲೆ ಜೀವಿಗಳಿದ್ದಾರೆಂಬ ನಾಲಿಗೆಯ ಮಾತಿಗೆಲ್ಲಿ ಬೆಲೆ? ತನ್ನ ದೂರದರ್ಶಕದಲ್ಲಿ, 'ನಂಬಿದ್ದ ದೃಶ್ಯವನ್ನು' ಲೊವೆಲ್ 'ಕಣ್ಣಾರೆ ಕಂಡಿದ್ದ'! ಕ್ರಿ.ಶ ೧೯೬೦ರ ಸುಮಾರಿಗೆ ಋತುಮಾನದ ಬದಲಾವಣೆಯೊಂದಿಗೆ ಮಂಗಳಲ್ಲಿ ಕಗ್ಗತ್ತಲ ಪ್ರದೇಶವೊಂದು ಕೆಲವರಿಗೆ ಕಂಡಿತು. ಖಂಡಿತವಾಗಿಯೂ ಇದೊಂದು ದಟ್ಟ ಕಾನನ ಎಂಬ ಗುಲ್ಲಿನೊಂದಿಗೆ ಮಂಗಳನಿಗೆ ಮತ್ತೊಮ್ಮೆ 'ಜೀವಿ'ಗ್ರಹವೆಂಬ ಪಟ್ಟ ಬಂತು. ಕ್ರಿ.ಶ ೧೯೬೫ರ 'ಮರಿನರ್-೪' ಯಾತ್ರೆ ಮಂಗಳನಲ್ಲಿ ಹಸಿರಿನ ಹೆಸರೇ ಇಲ್ಲ ಎಂಬುದನ್ನು ಚಿತ್ರಗಳ ಮೂಲಕ ಸಾಬೀತು ಮಾಡಿತು. ಅಂದು ತೆಗೆದ ಇಪ್ಪತ್ತೆರಡು ಚಿತ್ರಗಳಲ್ಲಿ ಚಂದ್ರನಂತೆಯೇ ಬಂಜರಾಗಿದ್ದ ಮಂಗಳನ ಮೇಲ್ಮೈ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

೧೯೬೯ರಲ್ಲಿ ಚಂದ್ರನ ಮೇಲೆ 'ಅಪೋಲೊ-೧೧' ಇಳಿದ ಸ್ವಲ್ಪ ದಿನಗಳ ನಂತರ, 'ಮರಿನರ್-೬' ಮತ್ತು 'ಮರಿನರ್-೭' ನೌಕೆಗಳು ಮಂಗಳನ ಮೇಲಿಳಿಯದೆಯೇ ಒಂದಷ್ಟು ಚಿತ್ರಗಳನ್ನು ತೆಗೆದವು. ಆ ಚಿತ್ರಗಳಲ್ಲಿ ದಕ್ಷಿಣ ಧ್ರುವದಲ್ಲಿದ್ದ ಇಂಗಾಲದ ಡೈ ಆಕ್ಸೈಡ್‌ನ 'ಒಣ' ಮಂಜು, ಹಾಗೂ ಮರಳುಗಾಡಿನ ದೊಡ್ಡ ಕುಳಿಗಳನ್ನು ಕಾಣಬಹುದಾಗಿತ್ತು. ೧೯೭೧ರಲ್ಲಿ ಸೋವಿಯತ್ ರಶಿಯಾ ಕಳುಹಿಸಿದ 'ಮಾರ್ಸ್-೨' ಮತ್ತು 'ಮಾರ್ಸ್-೩' ನೌಕೆಗಳು ಮಂಗಳನ ಮೇಲ್ಮೈನ ಸಮೀಕ್ಷೆ ನಡೆಸಿದವು. ವಾಹನವೊಂದನ್ನು ಇಳಿಸುವ ಪ್ರಯತ್ನ ವಿಫಲವಾಯಿತು. ಅದರ ಮುಂದಿನ ವರ್ಷ ಹೊರಟ 'ಮರಿನರ್-೯'ರ ಪರಿವೀಕ್ಷಣೆಗೆ ಧೂಳಿನ ಬಿರುಗಾಳಿ ಅಡ್ಡಬಂತು. ವತಾವರಣ ತಿಳಿಯಾಗಲು ಅದು ವಾರಗಟ್ಟಲೆ ಕಾಯಬೇಕಾಯಿತು. ನಂತರ ಕಂಡದ್ದೇನೆಂದರೆ ಬೃಹತ್ ಜ್ವಾಲಾಮುಖಿಗಳ ಸರಣಿ, ಕೊಳ್ಳಗಳ ಪಾತಳಿ ಜತೆಗೆ ಉತ್ತರ ಧ್ರುವದಲ್ಲೂ ಇರುವ ಮಂಜಿನ ಟೊಪ್ಪಿಗೆ. ನಂತರದಲ್ಲಿ, ಬುಧ ಹಾಗೂ ಶುಕ್ರ ಗ್ರಹದ ಕಕ್ಷೆಯನ್ನು ಮುಟ್ಟುವಂಥ ನೌಕೆಗಳನ್ನು ರೂಪಿಸಿ ಕಳುಹಿಸಲಾಯಿತು.

ಜೀವ ಜಗತ್ತಿನ ಯಾವುದೇ ಪಳೆಯುಳಿಕೆ ೧೯೭೬ರಲ್ಲಿ ಮಂಗಳನ ಮೇಲೆ ಮೊಟ್ಟ ಮೊದಲು ಇಳಿದ ವೈಕಿಂಗ್ ನೌಕೆಗೆ ಕಂಡು ಬರಲಿಲ್ಲ. ಅಂದಿನ ಕಾಲಕ್ಕೆ ತಂತ್ರಜ್ಞಾನದ ಮಹೋನ್ನತ ಸಾಧನೆಯಾಗಿತ್ತು, ಆ ವೈಕಿಂಗ್ ಯಾತ್ರೆ. ಜೈವಿಕ ಕುರುಹುಗಳು ಸಿಗದೇ ನಿರಾಶರಾದ ಅಮೆರಿಕದ ವಿಜ್ಞಾನಿಗಳು ಎರಡು ದಶಕಗಳ ಕಾಲ ಮಂಗಳಾನ್ವೇಷಣೆಯನ್ನು ಕೈಬಿಟ್ಟರು. ಅಲ್ಲಿಂದೀಚೆಗೆ ಜೀವಕಣಗಳ ಹುಡುಕಾಟಕ್ಕಿಂತಲೂ ತಂತ್ರಜ್ಞಾನ ಅಭಿವೃದ್ಧಿಗೆ ಪೂರಕವಾದ ಯೋಜನೆಗಳಿಗೆ ಪ್ರಾಶಸ್ತ್ಯ ಸಿಕ್ಕವು. ಬುಧ ಹಾಗೂ ಶುಕ್ರ ಗ್ರಹದ ಕಕ್ಷೆಯನ್ನು ಮುಟ್ಟುವಂತೆ ನೌಕೆಯನ್ನು ರೂಪಿಸಲಾಯಿತು. ಇದರಲ್ಲಿ ಪ್ರಮುಖವಾದವುಗಳೆಂದರೆ ಗುರು, ಶನಿ, ಯುರೇನಸ್, ನೆಪ್ಚ್ಯೂನ್ ದಾಟಿ ಹೋಗುವ 'ವಾಯೇಜರ್' ನೌಕಾಯಾನ ಹಾಗೂ ಗುರು ಗ್ರಹದ ಅನ್ವೇಷಣೆಗೆಂದೇ ಸಜ್ಜಾದ 'ಗೆಲಿಲಿಯೊ' ನೌಕೆಯ ಪಯಣ. ಮಂಗಳ ಗ್ರಹ ಮತ್ತೆ ಆಸಕ್ತಿ ಕೆರಳಿಸಿದ್ದು

೧೯೮೯ರಲ್ಲಿ. ರಶಿಯಾದ 'ಫೋಬಸ್-೨' ನೌಕೆಯು, ಮಂಗಳನ ಚಂದ್ರನಾದ 'ಫೋಬಸ್'ನ ಮೇಲೆ ಅನ್ವೇಷಣಾ ವಾಹನ ಇಳಿಸುವ ಪ್ರಯತ್ನದಲ್ಲಿ ವಿಫಲವಾಯಿತು. ಈಗಿನ ಅಮೆರಿಕದ ಅದ್ಯಕ್ಷರಾದ ಬುಷ್‌ರವರ ತಂದೆ ಬುಷ್-ಹಿರಿಯ ಅಮೆರಿಕದ ಅಧ್ಯಕ್ಷನಾಗಿದ್ದ ಕಾಲದಲ್ಲಿ (೧೯೯೦) ಮಾನವ ಸಹಿತ ಮಂಗಳ ಯಾತ್ರೆಗೆ ಚಾಲನೆ ಬಂತು. ಐವತ್ತು ಸಾವಿರ ಕೋಟಿ ಡಾಲರ್‌ಗಳ ಅಂದಾಜು ಯೋಜನೆ ರಚನೆಯಾಯಿತು. ನಂತರ ಹಾರಿಸಲಾದ ೧೯೯೩ರ 'ಮಾರ್ಸ್ ಆರ್ಬಿಟಲ್' ನೌಕೆಯು ಮಂಗಳನನ್ನು ಸುತ್ತುವ ಕಕ್ಷೆ ಸೇರಬೇಕಿದ್ದ ಮೂರು ದಿನಗಳ ಮೊದಲೇ ಕಣ್ಮರೆಯಾಯಿತು. ಜತೆಗೆ ವಿಜ್ಞಾನಿಗಳ ಉತ್ಸಾಹದ ಬುಗ್ಗೆಗಳೂ ಮಾಯವಾದವು. ಮುಂದೆ ಮಂಗಳನನ್ನು ಮುಟ್ಟಿದ್ದು/ಗುದ್ದಿದ್ದು 'ಡೀಪ್‌ಸ್ಪೇಸ್' (೧೯೯೯) ನೌಕೆ. ಆನಂತರ 'ಒಡಿಸ್ಸಿ' (೨೦೦೧) ನೌಕೆಯ ಸುದೀರ್ಘ ವಿಹಾರದ ತನಕ ಮಂಗಳ ಗ್ರಹಾನ್ವೇಷಣೆ ನಡೆಸಿತು. ಬುಧ ಗ್ರಹದತ್ತ ವಿಜ್ಞಾನಿಗಳ ಚಿತ್ತದ ತಿರುಗಿದ್ದು ೨೦೦೪ರಲ್ಲಿ. ೨೦೦೫ರಲ್ಲಿ 'ಆರ್ಬಿಟರ್' ಮಂಗಳನತ್ತ ಪಯಣಿಸಿದರೆ ಯುರೋಪಿಯನ್ ದೇಶಗಳ 'ವೀನಸ್ ಎಕ್ಸ್‌ಪ್ಲೋರರ್' ಶುಕ್ರನತ್ತ ಸಾಗಿತು.

ಒಂದು ಗುಂಪಿನ ಖಗೋಳ ವಿಜ್ಞಾನಿಗಳ ಅಭಿಪ್ರಾಯದಂತೆ ಭೂಮಿಯ ಆರಂಭದ ದಿನಗಳಲ್ಲಿ ಅಂದರೆ ಕೇವಲ ನೂರು ಕೋಟಿ ವರ್ಷ ಮಾತ್ರ ವಯಸ್ಸಾಗಿದ್ದಾಗ, ಮಂಗಳನ ವಾತಾವರಣ ಭೂಮಿಗಿಂತಲೂ ಹಿತಕರವಾಗಿತ್ತಂತೆ. ನೀರಿದ್ದರೆ ತಾನೆ ಜೀವ ಜಗತ್ತು. ಮಂಗಳನಲ್ಲಿ ನೀರಿನ ಸೆಲೆಯನ್ನು ಮೊದಲು ಹುಡುಕುವ ಎಂದು ಯೋಜನೆಗಳನ್ನು ಅವರು ಹಮ್ಮಿಕೊಂಡರು. ಇದುವರೆಗೂ ನಡೆದಿರುವ ಯಾವುದೇ ಅನ್ವೇಷಣೆಯಲ್ಲೂ ಮಂಗಳನಲ್ಲಿನ 'ಜೈವಿಕ' ಕುರುಹುಗಳು ಕಂಡು ಬಂದಿಲ್ಲ. ಆದರೂ ಈ ಅನ್ವೇಷಣೆಗಳು ರಾಸಾಯನಿಕ ಮೂಲ ವಸ್ತುಗಳು ಮತ್ತು ಖನಿಜಗಳನ್ನು ಅರಸುತ್ತ, ನೀರಿನ ಸೆಲೆಯಿದೆಯೇ ಎಂದು ಹುಡುಕುತ್ತಾ ಓಡಾಡಿವೆ. 'ಸ್ಯಾಂಪಲ್'ಗಳನ್ನೂ ಸಂಗ್ರಹಿಸಿವೆ. ಮುಂದೆ ಎಂದಾದರೂ ಗಗನಯಾತ್ರಿಗಳು ಬಂದಿಳಿದರೆ ಉಳಿದುಕೊಳ್ಳಲು ಸೂಕ್ತ ಜಾಗಗಳಿವೆಯೆ? ವಿಕಿರಣದ ಪ್ರಖರತೆ ಎಷ್ಟಿದೆ? ಮುಂತಾದ ಮಾಹಿತಿಯನ್ನು ಭೂಮಿಗೆ ರವಾನಿಸಲಿದೆ.

ಈ ಮಂಗಳ ಗ್ರಹವು ಸೂರ್ಯನಿಂದ ಸುಮಾರು ೨೩ ಕೋಟಿ ಕಿ.ಮೀ ದೂರದಲ್ಲಿದೆ. ಅಂದರೆ ಭೂಮಿಗೂ ಸೂರ್ಯನಿಗೂ ಇರುವ ಅಂತರದ ಒಂದೂವರೆ ಪಟ್ಟು. ಭೂಮಿಗಾಗಿರುವಷ್ಟೇ ೪೬೦ ಕೋಟಿ ವರ್ಷ ಮಂಗಳನದು. ಇನ್ನು ದಿನದ ಲೆಕ್ಕಾಚಾರ ತೆಗೆದುಕೊಂಡರೆ ಮಂಗಳನದು ಭೂಮಿಯ ದಿನಕ್ಕಿಂತ ಕೇವಲ ೩೭ ನಿಮಿಷ, ೨೬ ಸೆಕೆಂಡ್ ಹೆಚ್ಚಷ್ಟೇ. ಸೂರ್ಯನಿಂದ ದೂರವಿರುವ ಕಾರಣ ಅಲ್ಲೊಂದು ವರ್ಷ ಕಳೆಯಬೇಕೆಂದರೆ ನಮ್ಮಲ್ಲಿನ ೬೮೭ ದಿನ ಬೇಕು. ತಾಪಮಾನ ಕನಿಷ್ಟ -೧೨೩ ಡಿಗ್ರಿ ಸೆಂಟಿಗ್ರೇಡ್‌ನಿಂದ ಗರಿಷ್ಟ +೩೭ ಡಿಗ್ರಿ ಸೆಂಟಿಗ್ರೇಡ್ ಮುಟ್ಟಬಹುದು. ಗುರುತ್ವಾಕರ್ಷಣೆಯೂ ಇಲ್ಲಿ ಕಮ್ಮಿ. ನೂರು ಕೆ.ಜಿ ತೂಗುವ ಮನುಷ್ಯನೊಬ್ಬ ಮಂಗಳನಲ್ಲಿ

ಇಳಿದೊಡನೆ ಮೂವತ್ತೊಂಭತ್ತು ಕೆ.ಜಿ.ಯಷ್ಟಾಗಬಲ್ಲ. ಪ್ರತಿಶತ ೯೫ಕ್ಕೂ ಹೆಚ್ಚು ಭಾಗ ಇಂಗಾಲದ ಡೈ ಆಕ್ಸೈಡ್ ತುಂಬಿರುವ ವಾತಾವರಣದಲ್ಲಿ ಶೇ.೩ ಸಾರಜನಕ ಮತ್ತು ಶೇ. ೧.೬ ರಷ್ಟು ಆರ್ಗ್ಗಾನ್ ಅನಿಲಗಳಿವೆ. ಬಸಾಲ್ಟ್ ಕಲ್ಲಿನ ಉರುಟಾದ ಮೇಲ್ಮೈ, ಅಲ್ಲಲ್ಲಿ ಹಳ್ಳ-ಕೊಳ್ಳ, ಉರಿಯುವ ಜ್ವಾಲಾಮುಖಿ ಎಲ್ಲವೂ ಇವೆ. ದಕ್ಷಿಣ ಧ್ರುವದಲ್ಲಿ ನೀರು ಮತ್ತು ಇಂಗಾಲದ ಡೈ ಆಕ್ಸೈಡ್‌ನ ಮಂಜುಗಡ್ಡೆಯಿದೆ. ಕೆಂಪು ಗ್ರಹವೆಂಬ ಹೆಗ್ಗಳಿಕೆಗೆ ಕಾರಣವಾದ ಕೆಮ್ಮಣ್ಣು ಇಲ್ಲಿ ಹೇರಳವಾಗಿದೆ.

ಮಾನವ ಸಹಿತ ಮಂಗಳ ಗ್ರಹ ಯಾತ್ರೆ ಹೇಗಿರಬಹುದು? ಮಧ್ಯೆ ಇಳಿಯಲಾಗದ, ಕಿಟಕಿಯಿಂದ ಇಣಕಿಯೂ ನೋಡಲಾಗದ ತಿಂಗಳುಗಟ್ಟಲೆ ಸಾಗುವ ಕಾರ್ ಪಯಣ ಹೇಗಿರುತ್ತದೆಯೆಂದು ಊಹಿಸಿ. ಅದಕ್ಕಿಂತ ಭಿನ್ನವಿರದು ಮಂಗಳ ಗ್ರಹ ಸೇರುವ ಈ ಏಕತಾನತೆಯ ಪಯಣ. ಸಾವಿಗೂ ಬದುಕಿಗೂ ನಡುವಿನಲ್ಲಿರುವ ಅಂತರ ಕೇವಲ ನೌಕೆಯ ಗೋಡೆಯಷ್ಟೇ ಎಂಬ ಸತ್ಯ ಅರಿವಾದೊಡನೆ, ಮಂಗಳ ಯಾತ್ರಿಗಳ ಮನಸ್ಥಿತಿ ಹೇಗಿರುತ್ತದೆ? ಅವರಿಗೆ ಮನೋಸ್ಥೈರ್ಯ ತುಂಬಲು ಏನೆಲ್ಲ ಮಾಡಬೇಕು? ಎಲ್ಲರೂ ಧೃತಿ ಕೆಟ್ಟರೆ ನೌಕೆಯ ನಿಯಂತ್ರಣ ಹೇಗೆ? ಮುಂತಾದ ಪ್ರಶ್ನೆಗಳ ಸುರಿಮಳೆಯೇ ನಮ್ಮೆಲ್ಲರ ಮುಂದಿದೆ. ಪ್ರತಿಯೊಬ್ಬ ಯಾತ್ರಿಯ ಮಾನಸಿಕ ಆರೋಗ್ಯವನ್ನು ಸೂಕ್ಷ್ಮವಾಗಿ ಗಮನಿಸಿ, ಅವರನ್ನು ಕಾಡುತ್ತಿರುವ ತೊಂದರೆಗಳೇನು? ಅದನ್ನು ಪರಿಹರಿಸುವುದು ಹೇಗೆ? ಎಂದು ನಿರ್ಧರಿಸುವ 'ಕಂಪ್ಯೂಟರ್' ನಿರ್ಮಾಣವಾಗಬೇಕು. ಪ್ರತಿಯೊಬ್ಬನ ರಕ್ತದೊತ್ತಡ, ಹೃದಯ ಬಡಿತ, ಉಸಿರಾಟದ ವೇಗ, ಬೆವರು ಗ್ರಂಥಿಗಳ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುವುದರ ಜತೆಗೆ ಜೊಲ್ಲಿನ ವಿಶ್ಲೇಷಣೆಯಿಂದ ಹಾರ್ಮೋನಿನ ಏರುಪೇರನ್ನು ಕಂಪ್ಯೂಟರೇ ದಾಖಲಿಸಿಕೊಳ್ಳುವ ವ್ಯವಸ್ಥೆ ಅಭಿವೃದ್ಧಿಯಾಗಬೇಕು. ಈ ಮಾಹಿತಿಯಿಂದ ವ್ಯಕ್ತಿಯೊಬ್ಬ ಖಿನ್ನತೆ, ಉದ್ವೇಗ, ಬಳಲಿಕೆ ಅಥವಾ ಮಾನಸಿಕ ಒತ್ತಡದಿಂದ ಬಳಲುತ್ತಿದ್ದಾನೆಯೆ? ಎಂದು ಕಂಪ್ಯೂಟರ್ ನಿರ್ಧರಿಸಬಲ್ಲದು. ಈ 'ಸಿಲಿಕಾನ್' ಮನೋವೈದ್ಯ ರೋಗಕ್ಕೆ ತಕ್ಕ ಮದ್ದನ್ನು 'ಪ್ರಿಸ್ಕ್ರೈಬ್' ಮಾಡುವ ಸಾಮರ್ಥ್ಯ ಹೊಂದಿರಬೇಕಾಗುತ್ತದೆ.

ಕೋಟ್ಯಂತರ ಕಿಲೋಮೀಟರ್ ದೂರದ ನೆಲೆಯಾದ ಮಂಗಳನಿಂದಾಗಲೀ ಅಥವಾ ಅಲ್ಲಿಗೆ ತೆರಳುವ ಹಾದಿಯಿಂದಾಗಲೀ ಭೂಮಿಯ ಜತೆ ಸಂಪರ್ಕ ಸಾಧಿಸುವುದು ಸುಲಭವಲ್ಲ. ಪ್ರತಿ ಮಾತುಕತೆಯ ನಡುವೆ ಹತ್ತು ನಿಮಿಷಗಳಿಗೂ ಮೀರಿದ ಅಂತರದಿಂದ, ನೇರ ಫೋನ್ ಸಂಭಾಷಣೆ ಸಾಧ್ಯವಿರದಿರಬಹುದು. ಇದೂ ಒಂದು ರೀತಿಯ ಮಾನಸಿಕ ಒತ್ತಡಕ್ಕೆ ಕಾರಣವಾಗಬಹುದು. ಆತ್ಮೀಯರನ್ನು ಸಂಪರ್ಕಿಸಲು ಇ-ಮೇಲ್ ಅಥವಾ ಧ್ವನಿ-ಮೇಲ್ (ವಾಯ್ಸ್ ಮೇಲ್) ಬಳಸಬೇಕೇನೋ? ಇಂತಹ ವಾತಾವರಣವನ್ನು ಕೃತಕವಾಗಿ ಸೃಷ್ಟಿಸಿ, ಮನುಷ್ಯನ ಪ್ರತಿಕ್ರಿಯೆಗಳು ಹೇಗಿರುತ್ತದೆಂಬುದನ್ನು ವಿಜ್ಞಾನಿಗಳು ಅಭ್ಯಸಿಸುತ್ತಿದ್ದಾರೆ. ಪ್ರತಿಕೂಲ ವಾತಾವರಣದಲ್ಲಿ ಮನುಷ್ಯನೊಬ್ಬನೇ ಅಲ್ಲ, ಯಂತ್ರ ಸಾಧನಗಳೂ ಕೆಲಸ ಮಾಡಬೇಕು. ಅದಕ್ಕೆ ಪೂರಕವಾದ ತಂತ್ರಜ್ಞಾನಗಳೂ ಬೆಳೆಯುತ್ತಿವೆ.

ಜತೆಗೆ ಅಗಾಧ ಮಾಹಿತಿ ಭಂಡಾರವೂ ಭರ್ತಿಯಾಗುತ್ತಿವೆ.

ಆಕಾಶವೇ ನಮಗೆ ಬೆರಗು ಹುಟ್ಟಿಸುವ ಅಂಗಳ. ಇನ್ನು ಬಾಹ್ಯಾಕಾಶವೆಂದರೆ ನಮ್ಮೆಲ್ಲರ ಕಲ್ಪನೆಗಳಿಗೆ ರೆಕ್ಕೆ-ಪುಕ್ಕ ಹಚ್ಚಿಸುವ ತಾಣ. ಊರಿನಿಂದ ಊರಿಗೆ ಪಯಣಿಸಲು ನಾವು ಬಸ್ಸು-ರೈಲು-ವಿಮಾನಗಳನ್ನು ಬಳಸುವಂತೆ ಬಾಹ್ಯಾಕಾಶದಲ್ಲಿನ ಪ್ರಯೋಗಶಾಲೆಗೆ ಹೋಗಿ ಬರಲು ಇಂದು ಸ್ಪೇಸ್ ಷಟಲ್‌ಗಳನ್ನು ಬಳಸಲಾಗುತ್ತಿದೆ. ಭೂಮಿಯ ಉಪಗ್ರಹವಾದ ಚಂದ್ರನ ಮೇಲೆ ಮನುಷ್ಯ ಇಳಿದಾಗಿದೆ. ಮತ್ತೆ, ಮತ್ತೆ ಚಂದ್ರನತ್ತ ನಮ್ಮೆಲ್ಲರ ಪಯಣ ಸಾಗಿದೆ. ಮಂಗಳ ಗ್ರಹದ ಮೇಲೆ ನೌಕೆಗಳನ್ನು ಇಳಿಸಿ ಓಡಿಸಿಯಾಯಿತು. ಇನ್ನು ಉಳಿದಿರುವುದು ಮಂಗಳ ಗ್ರಹದಲ್ಲಿ ಮನುಷ್ಯನನ್ನು ಇಳಿಸುವುದು. ಇದಕ್ಕೆ ಬೇಕಾದ ತರಬೇತಿಯನ್ನು ಬಹುಷಃ ಚಂದ್ರನ ಮೇಲೆ ಮಾಡಿಕೊಳ್ಳಬಹುದು. ಬುಧ ಹಾಗೂ ಶುಕ್ರ ಗ್ರಹಗಳು ಸೂರ್ಯನಿಗೆ ಭೂಮಿಗಿಂತಲೂ ತೀರಾ ಹತ್ತಿರವಿರುವ ಕಾರಣ, ತಾಪಮಾನದ ದೃಷ್ಟಿಯಿಂದ ಅನ್ವೇಷಣೆಗೆ ಹಾಗೂ ಮಾನವ ಸಹಿತ ಯಾನಕ್ಕೆ ಮಂಗಳವೇ ಶ್ರೇಷ್ಠ ಗ್ರಹ.

– ಸಾಭಾರ : ಅಂತರಗ್ರಹ ಅಭಿಯಾನಗಳು
ಕನ್ನಡ ತಾಂತ್ರಿಕ ಕಮ್ಮಟ–೨೦೦೮, ಇಸ್ರೋ ಉಪಗ್ರಹ ಕೇಂದ್ರ, ಬೆಂಗಳೂರು

* * *

೯ನೇ ಪುಟದಿಂದ..

ತಮ್ಮ ಕೊನೆಯ ಉಸಿರು ಇರುವರೆಗೂ ಮೂಲಭೂತವಾದಿಗಳನ್ನು ಎದಿರು ಹಾಕಿಕೊಂಡಿದ್ದರು ಮತ್ತು ದೂರವಿಟ್ಟಿದ್ದರು. ಅವರಿಗೆ ಕಾಶ್ಮೀರದ ಹುಲಿಯೆಂದೆ ಕರೆಯುತ್ತಿದ್ದರು. ದೇಶ ವಿಭಾಗವಾದಾಗ ಕಾಶ್ಮೀರದ ಮೇಲೆ ಪಾಕಿಸ್ತಾನದ ಸಹಾಯದೊಂದಿಗೆ ದಾಳಿ ಮಾಡಿದ ಗುಡ್ಡಗಾಡು ಜನರನ್ನು ಹಿಮ್ಮೆಟ್ಟಿಸಲು ಅವರು ಸ್ಥಾಪಿಸಿದ್ದ ರಾಷ್ಟ್ರೀಯ ಕಾಂಗ್ರೆಸ್ ಭಾರತದ ಸೇನೆಯೊಂದಿಗೆ ಸಹಕರಿಸಿತು. ಆ ಗುಡ್ಡಗಾಡು ದಾಳಿಕೋರರು ಶ್ರೀನಗರವನ್ನು ಆಕ್ರಮಿಸಿ ಕೊಳ್ಳುವುದನ್ನು ತಪ್ಪಿಸಿದರು. ೧೯೪೭ರಲ್ಲಿ ಪಾಕಿಸ್ತಾನದ ದಾಳಿಯ ಅನಾಹುತದಿಂದ ಪಾರು ಮಾಡಿದರು. ಕಾಶ್ಮೀರಿಗಳ ಪ್ರಗತಿ ಮತ್ತು ಆರ್ಥಿಕ ಏಳಿಗೆ ಭಾರತದೊಂದಿಗೆ ಇದೆಯೆಂಬ ವಾದವನ್ನು ಶೇಖ್ ಪ್ರತಿ ಪಾದಿಸಿದ್ದರು.

"ಭಾರತ ಒಂದು ಜಾತ್ಯಾತೀತ ರಾಜ್ಯ. ಆದ್ದರಿಂದ ರಾಷ್ಟ್ರೀಯ ಕಾಂಗ್ರೆಸ್ ಕಾಶ್ಮೀರವನ್ನು ಕೂಡ ಜಾತ್ಯಾತೀತ ಮಾಡಲು ನಿಶ್ಚಯಿಸಿತು. ಧರ್ಮದ ದೃಷ್ಟಿಯಿಂದ ಇಸ್ಲಾಂಮಿನಲ್ಲಿರುವ ಶ್ರೇಷ್ಠವಾದುದು ಭಾರತದ ಉಪಖಂಡದಲ್ಲಿದೆಯೇ ಹೊರತು, ಕಾಶ್ಮೀರದಲಿಲ್ಲ" ಎಂದು ಬರೆದಿದ್ದರು. ಇಂಥ ವ್ಯಕ್ತಿಯ ಜನ್ಮ ಶತಮಾನೋತ್ಸವವು ಡಿಸಂಬರ್ ೫ರಂದು ಯಾರ ಗಮನಕ್ಕೂ ಬರದೇ ಗತಿಸಿಹೋಯಿತು.

* * *

ಬಡತನ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸೇರಲಿ

– ಮಹಮ್ಮದ್ ಯೂನಸ್

(ಲೇಖಕರು ನೋಬೆಲ್ ಪ್ರಶಸ್ತಿ ಪಡೆದಾಗ ಮಾಡಿದ ಭಾಷಣದ ಪೂರ್ಣ ಪಾಠದ ಕೊನೆಯ ಕಂತು)

ಗರಿಷ್ಠ ಲಾಭವನ್ನು ಮಾಡುವ ಕಂಪನಿಗಳಿಗೂ ಕೂಡ ಸಾಮಾಜಿಕ ಹಿತಚಿಂತನೆಯ ವಾಣಿಜ್ಯ ರೂಪವನ್ನು ಕೊಡಬಹುದು. ಆಗ ಅಂಥ ಕಂಪನಿಯ ಬಹುಭಾಗದ ಒಡೆತನ ಅಥವಾ ಪೂರ್ಣ ಒಡೆತನವೇ ಬಡವರದ್ದಾಗಿರುತ್ತದೆ. ಇದು ಎರಡನೇ ಪ್ರಕಾರದ ಸಾಮಾಜಿಕ ವ್ಯವಹಾರ. ಗ್ರಾಮೀಣ ಬ್ಯಾಂಕ್ ಈ ಎರಡನೇ ಪ್ರಕಾರದ ಸಾಮಜಿಕ ವ್ಯವಹಾರವಾಗಿರುತ್ತದೆ. ಸಾಮಾಜಿಕ ಕಂಪನಿಗಳ ಷೇರುಗಳನ್ನು ದಾನಿಗಳ ಮೂಲಕ ಕಾಣಿಕೆಗಳೆಂದಾಗಿ ಪಡೆಯಬಹುದು ಅಥವಾ ತಮ್ಮ ಸ್ವಂತ ಹಣದಿಂದಲೇ ಖರೀದಿಸಬಹುದು. ಸಾಲ ಪಡೆಯುವವರು ತಮ್ಮ ಸ್ವಂತ ಹಣದಿಂದ ಗ್ರಾಮೀಣ ಬ್ಯಾಂಕಿನ ಷೇರುಗಳನ್ನು ಖರೀದಿಸುವರು. ಆದರೆ ಈ ಷೇರುಗಳನ್ನು ಬ್ಯಾಂಕಿನ ಸಾಲಗಾರರಲ್ಲದವರಿಗೆ ವರ್ಗಾಯಿಸುವಂತಿಲ್ಲ. ಬದ್ಧತೆಯುಳ್ಳ ವೃತ್ತಿಪರ ಸಮೂಹವು ಬ್ಯಾಂಕಿನ ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳುವುದು.

ದಾನಿಗಳು ಬಹು ಸುಲಭವಾಗಿ ಈ ಪ್ರಕಾರದ ಸಾಮಾಜಿಕ ವ್ಯವಹಾರ ಸೃಷ್ಟಿಸಬಹುದು. ಒಂದು ಸೇತುವೆಯನ್ನು ಕಟ್ಟಲು ದಾನಿಯು ಸಾಲವನ್ನು ಕೊಟ್ಟಾಗ ಅದು ಸ್ಥಳೀಯ ಬಡವರ ಮಾಲೀಕತ್ವದ 'ಸೇತುವೆ ಕಂಪನಿ'ಯನ್ನು ಸೃಷ್ಟಿಸಬಹುದು. ಬದ್ಧತೆಯುಳ್ಳ ವ್ಯವಸ್ಥಾಪಕ ಕಂಪನಿಗೆ ಅದನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿ ಕೊಡಬಹುದು. ಆ ಕಂಪನಿಯ ಆದಾಯ ಸ್ಥಳೀಯ ಬಡವರಿಗೆ 'ಡಿವಿಡೆಂಡ್' ಎಂದು ದೊರೆಯುವುದು. ಮತ್ತು ಇನ್ನೂ ಹೆಚ್ಚು ಸೇತುವೆಗಳನ್ನು ನಿರ್ಮಿಸುವ ಕೆಲಸಕ್ಕೆ ವಿನಿಯೋಗವಾಗುವುದು. ಇದೇ ರೀತಿ ರಸ್ತೆಗಳು, ಹೆದ್ದಾರಿಗಳು, ವಿಮಾನ ನಿಲ್ದಾಣ, ಬಂದರುಗಳು, ಇಂತಹುದೆ ಇತರ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಉಪಯೋಗಿಸಿಕೊಳ್ಳಬಹುದು. ಗ್ರಾಮೀಣ ಬ್ಯಾಂಕ್ ಎರಡು ಸಾಮಾಜಿಕ ವಾಣಿಜ್ಯ ವ್ಯವಹಾರವನ್ನು ಸೃಷ್ಟಿಸಿದೆ. ಅಪೌಷ್ಠಿಕತೆಯಿಮದ ಬಳಲುವ ಮಕ್ಕಳಿಗಾಗಿ ಪೌಷ್ಠಿಕಾಂಶವುಳ್ಳ ಮಜ್ಜಿಗೆಯನ್ನು ತಯಾರಿಸುವ ಕಂಪನಿ ಇದು. ಡೆನಾನ್‌ನೊಂದಿಗೆ ಒಂದು ಜಂಟಿ ಉದ್ಯಮವಾಗಿದೆ. ಬಂಂಗ್ಲಾದೇಶದ ಎಲ್ಲ ಕುಪೋಷಿತ ಮಕ್ಕಳಿಗೆ ಈ ಪೌಷ್ಠಿಕ ಮಜ್ಜಿಗೆ ದೊರೆಯಬೇಕೆಂಬ ಗುರಿ ಮುಟ್ಟುವವರೆಗೆ ಈ ಕಂಪನಿ ವಿಸ್ತ್ರುತಗೊಳ್ಳುತ್ತಾ ಹೋಗುವುದು. ಇನ್ನೊಂದು ಸಾಮಾಜಿಕ ವಾಣಿಜ್ಯ ಉದ್ಯಮ ಕಣ್ಣುಗಳ ಬಗ್ಗೆ ಗಮನವೀಯುವ ಸರಣಿ ಆಸ್ಪತ್ರೆಗಳು. ಪ್ರತಿಯೊಂದು ಆಸ್ಪತ್ರೆಯು ಪ್ರತಿವರ್ಷ ಹತ್ತು ಸಾವಿರ ಪೂರೆ ಶಸ್ತ್ರ ಚಿಕಿತ್ಸೆಯನ್ನು ಕೈಗೊಳ್ಳುತ್ತವೆ. ಶ್ರೀಮಂತರಿಗೆ ಮತ್ತು ಬಡವರಿಗೆ ಪ್ರತ್ಯೇಕವಾದ ಶುಲ್ಕವಿರುತ್ತದೆ.

ಸಾಮಾಜಿಕ ವ್ಯವಹಾರದಲ್ಲಿ ಬಂಡವಾಳ ಹೂಡಿದವರಲ್ಲಿ ಪರಸ್ಪರ ಸಂಪರ್ಕ ಸಾಧಿಸಲು ಸಾಮಾಜಿಕ ವ್ಯವಹಾರಗಳಿಗೆ ಸಂಬಂಧಿಸಿದ ಷೇರುಗಳನ್ನು ಮತ್ರ ಮಾರಾಟ ಮಾಡುವ ಸಾಮಾಜಿಕ ಸ್ಟಾಕ್ ಮಾರ್ಕೆಟ್‌ನ್ನು ಸೃಷ್ಟಿಸಬೇಕಾಗುತ್ತದೆ. ಬಂಡವಾಳ ಹೂಡಿಕೆದಾರರು ಈ ಸ್ಟಾಕ್ ಎಕ್ಸೇಂಜ್‌ಗೆ ಸಾಮಾಜಿಕ ವ್ಯವಹಾರವನ್ನು ಮಾಡಬೇಕೆಂಬ ಸ್ಪಷ್ಟ ವಿಚಾರದೊಂದಿಗೆ ಬರುತ್ತಾರೆ. ಆ ಸಾಮಾಜಿಕ ವ್ಯವಹಾರ ಅವರವರ ಇಚ್ಛೆಗೆ ಅನುಗುಣವಾಗಿ ಇರುಬಹುದು. ಹಣ ಸಂಪಾದಿಸಬೇಕೆನ್ನುವವರು ಹಾಲಿ ಇರುವ ಸ್ಟಾಕ್ ಮಾರ್ಕೆಟ್‌ಗೆ ಹೋಗುತ್ತಾರೆ. ಸಾಮಾಜಿಕ ಸ್ಟಾಕ್ ಎಕ್ಸೇಂಜ್ ಸರಿಯಾಗಿ ಕೆಲಸ ಮಾಡುವಂತಾಗಲು ನಾವು ರೇಟಿಂಗ್ ಏಜೆನ್ಸಿಗಳನ್ನು ಸೃಷ್ಟಿಸಬೇಕಾಗುವುದು. ಅಲ್ಲದೆ ಬಳಕೆಗೆ ಬರುವ ಶಬ್ದಗಳು ಒಂದು ಗುಣಮಟ್ಟದ್ದಾಗಿರುವಂತೆ ಮಾಡಬೇಕಾಗುವುದು. ಪರಿಣಾಮವನ್ನು ಅಳೆಯುವ ಅಳತೆಗೋಲುಗಳನ್ನು, ವರದಿ ಮಾಡುವ ನಮೂನೆಗಳನ್ನು ಕೂಡ ನಿಖರಗೊಳಸಬೇಕಾಗುತ್ತದೆ. ಅಲ್ಲದೆ, 'ದಿ ಸೋಷಿಯಲ್ ವಾಲ್ ಸ್ಟ್ರೀಟ್' ಎಂಬಂಥ ಹೊಸ ಹಣಕಾಸು ವಿಷಯದ ಪ್ರಕಟಣೆಗಳನ್ನು ಹೊಂದಬೇಕಾಗುತ್ತದೆ. ವಾಣಿಜ್ಯ ಶಾಲೆಗಳು ವಿವಿಧ ತರಬೇತಿಗಳನ್ನು ಕೊಡುವುದರ ಜೊತೆಗೆ ವಾಣಿಜ್ಯ ವ್ಯವಹಾರ ಡಿಗ್ರಿಗಳನ್ನೂ ಕೊಡುವುದು ಮತ್ತು ಅತ್ಯಂತ ದಕ್ಷತೆಯಿಂದ ಸಾಮಾಜಿಕ ವಾಣಿಜ್ಯ ಉದ್ಯಮಗಳನ್ನು ನಡೆಸುವ ಬಗ್ಗೆ ಯುವ ವ್ಯವಸ್ಥಾಪಕರಿಗೆ ತರಬೇತಿಯನ್ನು ಕೊಡುವುದು. ಎಲ್ಲಕ್ಕಿಂತ ಹೆಚ್ಚಾಗಿ ಉದ್ದಿಮೆದಾರರೇ ಸ್ವಂತ ಸಾಮಾಜಿಕ ವಾಣಿಜ್ಯೋದ್ಯಮಿಗಳಾಗಿ ಪರಿವರ್ತನೆಗೊಳ್ಳುವಂತೆ ಅವರಿಗೆ ಪ್ರೇರಣೆ ಕೊಡುತ್ತದೆ.

ನಾನು ಜಾಗತೀಕರಣವನ್ನು ಸಮರ್ಥಿಸುತ್ತೇನೆ. ಅಲ್ಲದೆ, ಅದು ಬಡ ಜನರಿಗೆ ಬೇರೆಯಾವುದೇ ಪರ್ಯಾಯಕ್ಕಿಂತ ಹೆಚ್ಚು ಪ್ರಯೋಜನಗಳನ್ನು ತಂದು ಕೊಡುತ್ತದೆ ಎಂದೂ ನಂಬಿದ್ದೇನೆ. ಆದರೆ ಅದು ಸೂಕ್ತ ರೀತಿಯ ಜಾಗತೀಕರಣವಾಗಿರಬೇಕಷ್ಟೆ. ನನ್ನ ಮಟ್ಟಿಗೆ ಜಾಗತೀಕರಣ ಒಂದು ನೂರು ಉಪದಾರಿಗಳನ್ನು ಹೊಂದಿರುವ, ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿನತ್ತ ಹೋಗುವ ಹೆದ್ದಾರಿಯಂತಿದೆ. ಒಂದು ವೇಳೆ ಅದು ಎಲ್ಲರಿಗೂ ಮುಕ್ತವಾದ ಹೆದ್ದಾರಿಯಾದಲ್ಲಿ ಅದರ ಉಪದಾರಿಗಳನ್ನು ಶಕ್ತಿಯುತ ಅರ್ಥಶಾಸ್ತ್ರದ ಬೃಹತ್ ಟ್ರಕ್‌ಗಳು ಉಪಯೋಗಿಸುವವು. ಬಾಂಗ್ಲಾದೇಶಿ ರಿಕ್ಷಾಗಳು ಹೆದ್ದಾರಿಯಿಂದಾಚೆಗೆ ತಳ್ಳಲ್ಪಡುವವು. ಸಮಾನ ಅವಕಾಶದ ಜಾಗತೀಕರಣವನ್ನು ಹೊಂದಬೇಕಾದರೆ ಆ ಹೆದ್ದಾರಿಯು ಸಂಚಾರಿ ನಿಯಮಗಳನ್ನೂ, ಸಂಚಾರಿ ಪೋಲೀಸರನ್ನೂ ಮತ್ತು ಈ ಹೆದ್ದಾರಿಗಾಗಿಯೇ ಒಂದು ಸಂಚಾರಿ ನಿಗಮವನ್ನೂ ಸ್ಥಾಪಿಸಬೇಕು. ಬಲಶಾಲಿಗಳಿಗೆ ಜಯ ಎಂಬ ತತ್ವ ಕಡು ಬಡವರನ್ನು ಆಚೆ ತಳ್ಳದೆ ಅವರಿಗೂ ಒಂದು ಸ್ಥಾನ ಇದೆಯೆಂಬ ತತ್ವ ಸ್ಥಾಪಿಸಲ್ಪಡಬೇಕು. ಜಾಗತೀಕರಣವು ಆರ್ಥಿಕ ವಸಹಾತುಶಾಹಿಯಾಗಿ ಪರಿವರ್ತಿತಗೊಳ್ಳಬಾರದು.

ಬಲಾಢ್ಯವಾದ ಬಹುರಾಷ್ಟ್ರೀಯ ಸಾಮಾಜಿಕ ವಾಣಿಜ್ಯೋದ್ಯಮಗಳಿಂದ ಜಾಗತೀಕರಣದ ಪ್ರಯೋಜನವು ಬಡವರಿಗೆ ಮತ್ತು ಬಡದೇಶಗಳಿಗೆ ದೊರೆಯುವಂತೆ

ಮಾಡಬೇಕು. ಸಾಮಾಜಿಕ ವಾಣಿಜ್ಯವು ತನ್ನ ಒಡೆತನವನ್ನು ಬಡವರಿಗೆ ಒದಗಿಸುತ್ತದೆ. ಇಲ್ಲವೆ ಬಂದ ಲಾಭವು ಬಡದೇಶಗಳಲ್ಲಿಯೇ ಉಳಿಯುವಂತೆ ಮಾಡುತ್ತದೆ. ಏಕೆಂದರೆ ಡಿವಿಡೆಂಡ್‌ಗಳನ್ನು ಪಡೆಯುವುದೇ ಅವುಗಳ ಉದ್ದೇಶವಾಗಿರುವುದಿಲ್ಲ. ಅಲ್ಲದೆ ವಿದೇಶ ಮೂಲದ ಸಾಮಾಜಿಕ ವಾಣಿಜ್ಯ ಸಂಸ್ಥೆಗಳಿಂದ ನೇರವಾಗಿ ಬಂಡವಾಳ ಹೂಡಿಕೆಯಾದಾಗ ಆ ಬಂಡವಾಳವನ್ನು ಪಡೆಯುವ ದೇಶಗಳಿಗೆ ಅದೊಂದು ಪುಳಕಗೊಳಿಸುವ ಸಂಗತಿಯಾಗುತ್ತದೆ. ಬಡದೇಶಗಳ ರಾಷ್ಟ್ರೀಯ ಹಿತಾಸಕ್ತಿಯನ್ನು ಲೂಟಿ ಮಾಡುವ ಕಂಪನಿಗಳಿಂದ ರಕ್ಷಿಸುವುದರ ಮೂಲಕ ಬಡದೇಶಗಳಲ್ಲಿ ಶಕ್ತಿಯುತ ಅರ್ಥವ್ಯವಸ್ಥೆಯನ್ನು ನಿರ್ಮಿಸಲು ಸಾಧ್ಯವಾಗುವುದು. ಸಾಮಾಜಿಕ ವಾಣಿಜ್ಯೋದ್ಯಮ ಆಸಕ್ತಿಯ ಪ್ರಮುಖ ಕ್ಷೇತ್ರವಾಗುವುದು.

ನಾವೇನು ಬಯಸುವೆವೋ ಅದು ನಮಗೆ ದೊರೆಯುತ್ತದೆ ಅಥವಾ ಯಾವುದನ್ನು ನಿರಾಕರಿಸುವುದಿಲ್ಲವೋ ಅದನ್ನು ಪಡೆಯುತ್ತೇವೆ. ನಮ್ಮ ಸುತ್ತಲೂ ಬಡವರು ಇದ್ದೇ ಇರುತ್ತಾರೆ. ಬಡತನವೆಂಬುದು ಮಾನವ ಕುಲದ ಹಣೆಯ ಬರಹವೆಂಬ ವಸ್ತು ಸ್ಥಿತಿಯನ್ನು ನಾವು ಒಪ್ಪಿದ್ದೇವಾದ್ದರಿಂದಲೇ ನಮ್ಮ ಸುತ್ತಲೂ ನಾವು ಬಡ ಜನರನ್ನು ಹೊಂದಿದ್ದೇವೆ. ನಾವು ಬಡತನವನ್ನು ಸ್ವೀಕರಿಸುವುದಿಲ್ಲ ಮತ್ತು ಅದು ನಾಗರೀಕ ಸಮಾಜಕ್ಕೆ ಸಂಬಂಧಿಸಿದ್ದಲ್ಲ ಎಂದು ನಾವು ದೃಢವಾಗಿ ನಂಬಿದ್ದಿದ್ದರೆ ಈ ಹೊತ್ತಿಗೆ ನಾವು ಬಡತನರಹಿತ ಜಗತ್ತನ್ನು ನಿರ್ಮಿಸಲು ಅಗತ್ಯವಾದ ಸೂಕ್ತ ಸಂಸ್ಥೆಗಳನ್ನೂ ಮತ್ತು ನೀತಿಗಳನ್ನೂ ನಿರ್ಮಿಸಿಕೊಂಡಿರುತ್ತಿದ್ದೆವು. ನಾವು ಏನನ್ನು ಪಡೆಯ ಬೇಕು ಮತ್ತು ಹೇಗೆ ಪಡೆಯುತ್ತೇವೆ ಎಂಬುದು ನಮ್ಮ ಮನೋಸ್ಥಿತಿಯನ್ನು ಅವಲಂಬಿಸಿದೆ. ಒಂದು ಸಲ ಒಂದು ಪ್ರಕಾರದ ಮನೋಸ್ಥಿತಿ ನಿರ್ಮಾಣವಾದರೆ ಅದನ್ನು ಬದಲಾಯಿಸುವದು ತುಂಬ ಕಷ್ಟಕರವೇ. ನಮ್ಮ ಮನೋಸ್ಥಿತಿಗೆ ಅನುಗುಣವಾದ ಜಗತ್ತನ್ನು ನಾವು ನಿರ್ಮಿಸಿಕೊಳ್ಳುತ್ತೇವೆ.

ಹೊಸ ಜ್ಞಾನ ಹೊರ ಹೊಮ್ಮಿದಂತೆ ನಾವು ನಮ್ಮ ದೂರ ದೃಷ್ಟಿಯ ರೀತಿಗಳನ್ನು ನಾವು ಸತತವಾಗಿ ಕಂಡುಹಿಡಿಯಬೇಕು ಮತ್ತು ನಮ್ಮ ಮನಸ್ಥಿತಿಯನ್ನು ಪರಿವರ್ತಿಸಿಕೊಳ್ಳಬೇಕು. ನಾವು ನಮ್ಮ ಮನಸ್ಥಿತಿಯನ್ನು ಪರಿವರ್ತಿಸಿಕೊಂಡರೆ ಜಗತ್ತನ್ನೂ ಪರಿವರ್ತಿಸಬಹುದು.

ಬಡತನವೆಂಬುದನ್ನು ಬಡಜನರು ನಿರ್ಮಿಸಿದ್ದಲ್ಲ. ಆದ್ದರಿಂದ ನಾವು ಬಡತನ ರಹಿತ ಜಗತ್ತನ್ನು ನಿರ್ಮಿಸಬಹುದೆಂದು ನಾನು ನಂಬಿದ್ದೇನೆ. ನಾವು ನಮಗಾಗಿ ಸೃಷ್ಟಿಸಿಕೊಂಡಿರುವ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಿಂದ ಬಡತನ ನಿರ್ಮಾಣಗೊಂಡು ಮತ್ತು ಉಳಿದುಕೊಂಡು ಬಂದಿದೆ. ಮಾನವನ ಸಾಮರ್ಥ್ಯವು ಅದು ಸಹಜವಾಗಿ ಇರುವುದಿಕ್ಕಿಂತ ಕಡಿಮೆ ಇದೆ ಎಂದು ಭಾವಿಸಿ ತುಂಬಾ ಸಂಕುಚಿತ ಕಲ್ಪನೆಗಳ ಆಧಾರದ ಮೇಲೆ ನಮ್ಮ ಸೈದ್ಧಾಂತಿಕ ಊಹೆಗಳನ್ನೂ ರಚಿಸಿಕೊಂಡಿದ್ದೇವೆ. ಬಡತನ ನಮ್ಮ ಗ್ರಹಿಕೆ ಹಂತದಲ್ಲಿ ಉಂಟಾಗಿದೆಯೇ ಹೊರತು

ಅಭಾವದ ಕಾರಣದಿಂದ ಉಂಟಾದುದ್ದಲ್ಲ. ನಾವೆಲ್ಲರೂ ಸಾಮೂಹಿಕವಾಗಿ ಬಡತನ ರಹಿತ ಜಗತ್ತನ್ನು ನಿರ್ಮಿಸಬಹುದೆಂದು ನಂಬಿದ್ದಲ್ಲಿ ಅಂಥ ಜಗತ್ತಿನ ನಿರ್ಮಾಣದ ಸಾಧ್ಯತೆಯಲ್ಲಿ ನನಗೆ ನಂಬಿಕೆ ಇದೆ. ಅಂಥ ಜಗತ್ತು ನಿರ್ಮಾಣವಾದಲ್ಲಿ ನಾವು ಬಡತನವನ್ನು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ನೋಡುವಂತಾಗುತ್ತದೆ. ಶಾಲಾ ಮಕ್ಕಳು ಆ ವಸ್ತು ಸಂಗ್ರಹಾಲಯಕ್ಕೆ ಹೋದಾಗ ಕೆಲವು ಮನುಷ್ಯರು ಅನುಭವಿಸಿದಂಥ ಬಡತನ ಮತ್ತು ಅವಮರ್ಯಾದೆಯನ್ನು ನೋಡಿ ಆಘಾತಕ್ಕೊಳಗಾಗುವರು. ಇಷ್ಟೊಂದು ಜನ ಈ ಅಮಾನವೀಯ ಪರಿಸ್ಥಿತಿಯನ್ನು ಸಹಿಸಿಕೊಂಡಿದ್ದಕ್ಕಾಗಿ ಮಕ್ಕಳು ತಮ್ಮ ತಾತಂದಿರನ್ನು ದೂಷಿಸುವರು. ಎಲ್ಲ ಮಾನವರು ತಮ್ಮ ಬಗ್ಗೆ ತಾವು ಗಮನಕೊಡುವಂಥ ಸಾಮರ್ಥ್ಯವನ್ನು ಹೊಂದಿರುವರಷ್ಟೇ ಅಲ್ಲ ಇಡೀ ಜಗತ್ತಿನ ಸುಖವನ್ನೂ ಹೆಚ್ಚಿಸುವುದಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಲು ಸಿದ್ಧರಿದ್ದಾರೆ. ಕೆಲವರು ತಮ್ಮಲ್ಲಿ ಅಡಗಿರುವ ಸಾಮಾರ್ಥ್ಯವನ್ನು ತಿಳಿದುಕೊಳ್ಳಲು ಸ್ವಲ್ಪವೇ ಅವಕಾಶವನ್ನು ಮಾತ್ರ ಪಡೆದಿದ್ದರೆ ಇನ್ನೂ ಬಹಳಷ್ಟು ಜನ ತಮ್ಮ ಜೀವಮಾನದಲ್ಲಿ ಈ ಅವಕಾಶವನ್ನೇ ಪಡೆಯುವುದಿಲ್ಲ. ತಾವು ಎಂಥ ಅದ್ಭುತವಾದ ಭಗ್ವತ್ ಕಾಣಿಕೆಯೊಂದಿಗೆ ಜನ್ಮ ತಾಳಿದ್ದೇವೆ ಎಂಬುದನ್ನು ತಿಳಿಯಲೂ ಸಹ ಅಸಮರ್ಥರಾಗುತ್ತಾರೆ. ಅವರು ಅಜ್ಞಾತರಾಗಿಯೇ ಸಾಯುತ್ತಾರೆ. ಜಗತ್ತು ಅವರ ಕ್ರಿಯಾಶೀಲತೆ ಮತ್ತು ಪಾಲ್ಗೊಳ್ಳುವಿಕೆಯಿಂದ ವಂಚಿತವಾಗಿಯೇ ಉಳಿಯುತ್ತದೆ. ಮಾನವನಲ್ಲಿರುವ ಕ್ರಿಯಾಶಕ್ತಿಯ ಬಗ್ಗೆ ಅವಿಚಲಿತ ನಂಬಿಕೆಯನ್ನು ಗ್ರಾಮೀಣ ಬ್ಯಾಂಕ್ ನನಗೆ ಕೊಟ್ಟಿದೆ. ಮಾನವರು ಹಸಿವೆ ಮತ್ತು ಬಡತನದ ಕಷ್ಟಗಳನ್ನು ಅನುಭವಿಸಲೆಂದೇ ಹುಟ್ಟಿಲ್ಲವೆಂದು ನಾನು ನಂಬುವಂತೆ ಮಾಡಿದೆ. ನನ್ನ ಮಟ್ಟಿಗೆ ಬಡಜನರೆಂದರೆ ಬೋನ್ಸಾಯ್ ಮರಗಳಂತೆ. ನೀವು ಅತ್ಯಂತ ಎತ್ತರವಾದ ಮರದ ಅತ್ಯಂತ ಉತ್ತಮವಾದ ಬೀಜವನ್ನು ಒಂದು ಹೂವಿನ ಕುಂಡದಲ್ಲಿ ನೆಟ್ಟಾಗ ಆ ದೊಡ್ಡ ಮರದ ತದ್ರೂಪವನ್ನು ಪಡೆಯುತ್ತೀರಿ. ಆ ತದ್ರೂಪಿಯು ಕೇವಲ ಒಂದೆರಡು ಇಂಚು ಮಾತ್ರ ಎತ್ತರ ಇರುತ್ತದೆ. ಇಲ್ಲಿ ಬೀಜದ್ದೇನೂ ತಪ್ಪಿಲ್ಲ. ಅದಕ್ಕೆ ದೊರಕಿಸಿದಂಥ ಮಣ್ಣಿನ ವಿಸ್ತಾರ ಕಡಿಮೆ ಇತ್ತು. ಬಡಜನರು ಬೋನ್ಸಾಯ್. ಅವರ ಮೂಲ ಸಾಮರ್ಥ್ಯದಲ್ಲಿ ಯಾವು ತಪ್ಪೂ ಇಲ್ಲ. ಅವರಿಗೆ ಎತ್ತರವಾಗಿ ಬೆಳೆಯಲು ಅಗತ್ಯವಾದ ಅವಕಾಶವನ್ನು ಸಮಾಜ ಕೊಡಲಿಲ್ಲ. ಬಡಜನರನ್ನು ಬಡತನದಿಂದ ಹೊರ ತರಬೇಕಾದರೆ ಅವರನ್ನು ಸಮರ್ಥರನ್ನಾಗಿ ಮಾಡುವ ಪರಿಸರವನ್ನು ನಿರ್ಮಿಸಬೇಕು. ಬಡವರು ಒಮ್ಮೆ ತಮ್ಮ ಶಕ್ತಿಯನ್ನೂ ಮತ್ತು ಕ್ರಿಯಾಶೀಲತೆಯನ್ನೂ ಮುಕ್ತಗೊಳಿಸಿಕೊಂಡರೆ ಬಡತನವು ತಕ್ಷಣವೇ ಕಣ್ಮರೆಯಾಗುವುದು. ಪ್ರತಿಯೊಬ್ಬ ಮನುಷ್ಯನೂ ತನ್ನ ಶಕ್ತಿ ಮತ್ತು ಕ್ರಿಯಾಶೀಲತೆಯನ್ನು ಹೊರ ಹೊಮ್ಮಿಸಲು ಸಾಧ್ಯವಾಗುವಂಥ ನ್ಯಾಯೋಚಿತವಾದ ಅವಕಾಶವನ್ನು ಕೊಡಲು ನಾವೆಲ್ಲರೂ 'ಕೈ ಜೋಡಿಸೋಣ'.

(ಅನು : ಸು.ಕೌ)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ಮಟ್ಟಿಗೆ ಹೊಸ ವರ್ಷದ ಪ್ರಾರಂಭ ಸಂಸ್ಥೆಯ ಉದ್ದೇಶಕ್ಕನುಗುಣವಾಗಿ ರಚನಾತ್ಮಕ ಕಾರ್ಯದಿಂದ ಪ್ರಾರಂಭವಾಯಿತು. ಹೊಸ ಜೀವನ ದಾರಿ ಕೇಂದ್ರದಲ್ಲಿ ಖಾದಿ ಮೂಲದ ಸಿದ್ಧ ಉಡುಪುಗಳ ತಯಾರಿಕಾ ಘಟಕವನ್ನು ಪ್ರಾರಂಭಿಸಲಾಯಿತು. ಈಗ ಘಟಕದಲ್ಲಿ ೧೫ ಮಹಿಳೆಯರು ತರಬೇತಿ ಪಡೆಯುತ್ತಿದ್ದಾರೆ. ಈ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಟ್ರಸ್ಟಿನ ಖಜಾಂಚಿ ಡಿ.ಪ್ರಭಾಕರ್ ಮತ್ತು ಸದಸ್ಯರಾದ ಸಂತೋಷ್ ಮತ್ತು ಗಿರಿಜಮ್ಮನವರು ಉಪಸ್ಥಿತರಿದ್ದರು. ಅಲ್ಲದೆ ಈ ಕೇಂದ್ರದ ಪ್ರಾರಂಭಕ್ಕೆ ಆರ್ಥಿಕ ನೆರವನ್ನು ನೀಡಿರುವ ಅಶೋಕ್‌ರಾವ್ ಮತ್ತು ಮಿತ್ರರಾದ ರವಿಕುಮಾರ್ ಹಾಗೂ ಲಲಿತಮ್ಮ ಕೂಡ ಹಾಜರಿದ್ದರು. ಅಲ್ಲದೆ ಹೊಳೆನರಸೀಪುರ ಖಾದಿ ಕೇಂದ್ರದ ಕಾರ್ಯದರ್ಶಿ ಮಹದೇವಪ್ಪ ಕಾರ್ಯಕರ್ತರಾದ ಪ್ರಭುಕೂಡ ಸಭೆಯಲ್ಲಿ ಇದ್ದರು.

ದಕ್ಷತೆಯಿಂದ ಉರಿಯುವ ಒಲೆಗಳ ಪ್ರಾತ್ಯಕ್ಷತೆ ತರಬೇತಿ ನಡೆಯಿತು. ಇದರಲ್ಲಿ ಆರುಜನ ಮಹಿಳೆಯರು ಸೇರಿ ಹದಿನಾರು ಜನ ಭಾಗವಹಿಸಿದ್ದರು.

ಇಂಗ್ಲೆಂಡಿನಲ್ಲಿರುವ ಟ್ರಸ್ಟಿನ ಅಭಿಮಾನಿಗಳಾದ ರಾಮಮೂರ್ತಿ ಮತ್ತು ಸೀತಾರಾಮಮೂರ್ತಿ ಟ್ರಸ್ಟಿಗೆ ಭೇಟಿ ಕೊಟ್ಟು ಪ್ರಗತಿಯನ್ನು ವೀಕ್ಷಿಸಿದರು.

ಮೇಲುಕೋಟೆ ಮತ್ತು ಸುತ್ತಲಿನ ಮಕ್ಕಳಿಗಾಗಿ 'ಕಥಾಕುಂಜ' ಎಂಬ ಹೆಸರಿನಲ್ಲಿ ಪ್ರತಿಶನಿವಾರ ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮವನ್ನು ಮೈಸೂರಿನ ಸದ್ವಿದ್ಯಾ ಶಾಲೆಯ ಉಪಾಧ್ಯಾಯರಾದ ಗಣೇಶ್‌ರವರು ಮಾಡಿದರು. ಹಿರಿಯ ನಾಗರಿಕರ ಸಭೆಯಲ್ಲಿ ಗಣೇಶ್‌ರವರು 'ಸರ್ವಜ್ಞನ ವಚನಗಳಲ್ಲಿ ಜೀವನಶೈಲಿ' ಕುರಿತು ಮಾತನಾಡಿದರು.

ತುಮಕೂರಿನ 'ನಾಟಕಮನೆ' ಸಂಸ್ಥೆಯವರು ಭಾಗವಂತಿಕೆ ಮೇಳ ನಡೆಸಿಕೊಟ್ಟರು. ಗ್ರಾಮಸ್ಥರು ಈ ಕಾರ್ಯಕ್ರಮವನ್ನು ನೋಡಿ ಸಂತೋಷಪಟ್ಟರು.


ಚಾಮರಾಜನಗರದ ಜ್ಞಾನಬಿಂದು ಸಂಸ್ಥೆಯವರು ಮೂರು ದಿನಗಳ ಶಿಬಿರ ನಡೆಸಿದರು.

<u>೨೦೦೮ ಡಿಸೆಂಬರ್ ಮತ್ತು ೨೦೦೯ ಜನೆವರಿ ಮಾಹೆಯ ದಾನಿಗಳು</u>

ಶ್ರೀ ಟಿ.ಆರ್.ಗಾಯಕವಾಡ್, ಶ್ರೀ ಅನಿಲ್‌ಕುಮಾರ್, ಶ್ರೀಮತಿ ಜಿ.ಸಿ.ಅನುಪಮಾ,
ಶ್ರೀ ಎ.ಜೆ.ಚಿದಾನಂದ, ಶ್ರೀ ನಂದಕುಮಾರ್, ಶ್ರೀಮತಿ ಸುಮತಿ, ಶ್ರೀ ರಾಮಮೂರ್ತಿ, ಶ್ರೀಮತಿ
ಎಂ.ಬಿ.ಸುಷ್ಮಾ, ಶ್ರೀ ಎಂ.ಬಿ.ರಾಮಸ್ವಾಮಿ, ಶ್ರೀಮತಿ ಆಶಾಲತಾ ಶಿವಪ್ರಸಾದ್ – ಬೆಂಗಳೂರು
ಶ್ರೀ ಬ್ರಹ್ಮದೇವಯ್ಯ, ಶ್ರೀ ಪಿ.ಎಸ್.ರಂಗನಾಥನ್ – ಮೈಸೂರು
ಶ್ರೀಮತಿ ಶುಭಮತಿ – ಶಿವಮೊಗ್ಗ
ಅಭಿನವ ಭಾರತಿ ವಿದ್ಯಾಕೇಂದ್ರ, ಶ್ರೀಮತಿ ವಿ.ಸರಸ್ವತಮ್ಮ – ಮಂಡ್ಯ
ಶ್ರೀ ಕೃಷ್ಣವಾದ್ಯಾರ್ – ಮೇಲುಕೋಟೆ
ಶ್ರೀ ಎ.ಎಚ್.ಕೇಸರಿಪ್ರಸಾದ್ – ಚೆನ್ನೈ ಮತ್ತು ಸಂಸ್ಥೆಯ ಎಲ್ಲಾ ಮಾಹೆಯಾನ ದಾನಿಗಳು.

ಜನಪದ ನಿಲಯದ ಅಂತರಂಗದಲ್ಲಿ.. ೭೩

– *ಸುರೇಂದ್ರ ಕೌಲಗಿ*



ಪೂರ್ವ ದಿಗಂತವು ಯಾವಾಗಲೂ ಚೇತೋಹಾರಿಯೂ, ಮನೋರಂಜಕವಾಗಿಯೂ, ಆಕರ್ಷಕವಾಗಿಯೂ ಇರುತ್ತದೆ. ಜನಪದ ನಿಲಯದ ಪೂರ್ವ ಭಾಗಕ್ಕೆ ಒಂದು ಬಾಗಿಲು ಮತ್ತು ಹಲವಾರು ಕಿಟಕಿಗಳು ಇವೆ. ವಿಶಾಲವಾದ ಹಿತ್ತಲು ಇದೆ. ಪೂರ್ವ ಬಾಗಿಲಿನಿಂದ ಹೊರ ಬಂದ ತಕ್ಷಣ ನರಸಿಂಹಸ್ವಾಮಿಯ ಬೆಟ್ಟ, ಅದರ ನೆತ್ತಿಯ ಮೇಲೆ ದೇವಸ್ಥಾನದ ಸುಂದರ ಗೋಪುರ ಕಾಣುತ್ತದೆ.

ಸೂರ್ಯೋದಯದ ಕಾಲಕ್ಕೆ ನೈರುತ್ಯ ದಿಕ್ಕಿನಿಂದ ಹೊರಹೊಮ್ಮುವ ಸೂರ್ಯನ ಕೆಂಪು ಕಿರಣಗಳು ಗೋಪುರದ ಮೇಲೆ ಬಿದ್ದು ಅದರ ಬಲಭಾಗ ತಿಳಿಗೆಂಪು ಬಣ್ಣ ಹೊಂದಿರುವುದನ್ನು ನೋಡುವುದೇ ಒಂದು ಆಹ್ಲಾದಕರ ಸಂಗತಿ. ಸಾಯಂಕಾಲದ ಸಮಯದಲ್ಲೂ ಪಶ್ಚಿಮ ದಿಕ್ಕಿನಲ್ಲಿ ಸೂರ್ಯನು ಅಸ್ತಂಗತನಾಗುವಾಗ ಹೊಮ್ಮುವ ಕೆಂಗಿರಣಗಳು ಗೋಪುರದ ಮೇಲೆ ಚೆಲ್ಲಾಟವಾಡುವಾಗ ಗೋಪುರ ಚಿನ್ನದ ಬಣ್ಣದಲ್ಲಿ ಅಭಿಷೇಕಗೊಳ್ಳುತ್ತಿರುವುದನ್ನು ನೋಡುವುದೇ ಒಂದು ಭಾಗ್ಯ. ಅಲ್ಲದೆ ಮಳೆಗಾಲದಲ್ಲಂತೂ ಆಕಾಶದಲ್ಲಿ ಕಪ್ಪು ಮೋಡಗಳು ಗೋಪುರಕ್ಕೆ ಹಿನ್ನೆಲೆಕೊಟ್ಟಾಗ ಪಶ್ಚಿಮ ದಿಕ್ಕಿನಲ್ಲಿ ಅಸ್ತಂಗತನಾಗುವ ಸೂರ್ಯನ ಕಿರಣಗಳು ಆ ಕಪ್ಪು ಮೋಡಗಳ ಮೇಲೆ ಚೆಲ್ಲಿದಾಗ ನಡೆಯುವ ಮೋಡಿ ಅದ್ಭುತವಾದದ್ದು. ಇದೆಲ್ಲವನ್ನು ನೋಡಿಯೇ ಅನುಭವಿಸ ಬೇಕು. ಒಂದೊಂದು ಸೂರ್ಯಾಸ್ತ, ಒಂದೊಂದು ಸೂರ್ಯೋದಯ ನರಸಿಂಹಸ್ವಾಮಿ ಬೆಟ್ಟಕ್ಕೂ, ಗೋಪುರಕ್ಕೂ ಹೊದಿಸುವ ದಿವ್ಯ ಭವ್ಯದ ಬಣ್ಣದ ಉಡುಪನ್ನು ನೋಡುವ ಅವಕಾಶ ನಿಲಯದ ಹಿತ್ತಲಿನಿಂದ ದೊರೆಯುತ್ತದೆ. ಇನ್ನು ಚಂದ್ರೋದಯದ ದರ್ಶನವೂ ಆಗುವುದು ಈ ಹಿತ್ತಲಿನ ವೈಶಿಷ್ಟ್ಯ. ನಿಲಯದ ಪೂರ್ವದಿಕ್ಕಿನಲ್ಲಿಯ ಬಾಗಿಲು ಮತ್ತು ಕಿಟಕಿಗಳಿಂದ ಸೂರ್ಯನ ಕಿರಣಗಳು, ಚಂದ್ರನ ಬೆಳಕು ಒಳಗೆ ಪ್ರವೇಶಿಸಿ ಮನೆಯನ್ನು ಶುದ್ಧಗೊಳಿಸುತ್ತವೆ, ಪವಿತ್ರಗೊಳಿಸುತ್ತವೆ. ನಿಲಯದ ಹಿತ್ತಲಿನಲ್ಲಿರುವ ಬಾವಿ ಮತ್ತು ಬೇಲದ ಮರ ಬರುವ ಅತಿಥಿಗಳನ್ನು ಆಕರ್ಷಿಸುತ್ತವೆ. ಈಗ ಕೊಳಾಯಿಯೇ ನೀರಿನ ಮೂಲವಾಗಿರುವುದರಿಂದ ಮನೆಗಳ ಹಿಂಭಾಗದಲ್ಲಿಯೂ ಮುಂಭಾಗದಲ್ಲಿಯೂ ಅಚ್ಚುಕಟ್ಟಾಗಿರುವ ಬಾವಿಗಳು ಇರುವುದೇ

ಬಹು ಅಪರೂಪ. ಮೇಲುಕೋಟೆಯಲ್ಲಿ ಇಂಥ ಬಾವಿಗಳನ್ನು ಹೊಂದಿರುವ ಕೆಲ ಮನೆಗಳು ಇವೆ. ಕೆಲ ಮನೆಗಳಂತೂ ಬಾವಿಯನ್ನು ಮನೆಯೊಳಗೆ ಹೊಂದಿವೆ. ಜನಪದ ನಿಲಯವು ಹೊಂದಿರುವ ಬಾವಿಗೆ ರಾಟೆ ಇರುವುದರಿಂದ ನಗರದಿಂದ ಬರುವ ಅತಿಥಿಗಳ ಮಕ್ಕಳು ಬಿಂದಿಗೆಯಿಂದ ನೀರೆಳೆಯಲು ಇಷ್ಟಪಡುತ್ತಾರೆ. ಬಿಂದಿಗೆ ತುಂಬ ನೀರೆಳೆದು ಬಿಟ್ಟರೆ ಅವರಿಗೆ ಖುಷಿಯೋ ಖುಷಿ. ವಿಶೇಷವಾದ ಸಾಹಸ ಮಾಡಿದ ಅನುಭವ; ಇನ್ನು ಹಿತ್ತಲಿನ ಮೂಲೆಯಲ್ಲಿರುವ ಬೇಲದಮರ ಶತಾಯುಷಿ ಇರಬಹುದು. ಇದು ಪ್ರತಿವರ್ಷ ತಪ್ಪದೇ ಕೊಡುವ ಬೇಲದ ಹಣ್ಣುಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ರುಚಿಯಲ್ಲಿ ಹಿರಿದು. ಗ್ರಾಮದಲ್ಲಿ ಬೇಲದ ಮರ ಅಪರೂಪವಾಗಿರುವುದರಿಂದ ಗ್ರಾಮದ ಶಾಲಾ ಮಕ್ಕಳ ಕಣ್ಣು ಈ ಮರದ ಹಣ್ಣುಗಳ ಮೇಲೆಯೇ. ಆದ್ದರಿಂದ ಶಾಲೆಗೆ ಹೋಗುವಾಗ, ಶಾಲೆಯಿಂದ ಹಿಂದಿರುಗುವಾಗ ಮಕ್ಕಳು ಈ ಹಣ್ಣುಗಳತ್ತ ಕಲ್ಲು ಬೀಸುವುದು ಅವರ ನಿತ್ಯಕಾಯಕ, ಅದರೆ ಕಲ್ಲುಗಳ ಗುರಿ ಹಣ್ಣುಗಳಿಗೆ ತಾಗುವುದು ಅಪರೂಪ. ಆದರೆ ಜನಪದ ನಿಲಯದ ಹೆಂಚುಗಳ ಮೇಲೆ ಬೀಳುವುದು ಮಾತ್ರ ಖಚಿತ! ಬೇಲದ ಹಣ್ಣುಗಳ ತೊಟ್ಟು ಗಟ್ಟಿಯಾಗಿರುವುದರಿಂದ ಹಣ್ಣುಗಳು ಸುಲಭವಾಗಿ ಬೀಳುವುದಿಲ್ಲ. ಕೆಲವೊಮ್ಮೆ ಗಾಳಿ ಜೋರಾಗಿ ಬೀಸಿದಾಗ ಅವು ಕೆಳಗೆ ಬೀಳುತ್ತವೆ. ಆಗ ಮಕ್ಕಳು ಗಿಡದ ಕೆಳಗೆ ಹಾಜರ್. ಬಿದ್ದ ಹಣ್ಣುಗಳನ್ನು ಆಯ್ದು ಅವನ್ನು ಒಡೆದು ತಿನ್ನುವ ಅವರ ಸಂಭ್ರಮ ದೀಪಾವಳಿ ಹಬ್ಬದ ಸಂಭ್ರಮಕ್ಕಿಂತ ಮಿಗಿಲಾಗಿರುತ್ತದೆ.

ಜನಪದ ನಿಲಯದ ಹಿತ್ತಿಲಲ್ಲಿರುವ ಮಣ್ಣು ತುಂಬಾ ಫಲವತ್ತಾಗಿದೆ. ಕರಿಬಣ್ಣದ ಹುಡಿಮಣ್ಣು. ಆದ್ದರಿಂದ ಅಲ್ಲಿ ಬೆಳೆಯಲಾಗುವ ವಿವಿಧ ಬಗೆಯ ತರಕಾರಿ ಹುಲುಸಾಗಿ ಬೆಳೆಯುತ್ತದೆ. ಈ ಹಿತ್ತಲಲ್ಲಿ ಮತ್ತು ಕರುಣಾಗೃಹದ ಬಳಿಯ ಭೂಮಿಯಲ್ಲಿ ಗಿರಿಜಮ್ಮನವರ ಮಾರ್ಗದರ್ಶನ ಮತ್ತು ಶ್ರಮದಿಂದ ಬೆಳೆಯಲಾಗುವ ತರಕಾರಿ ಟ್ರಸ್ಟಿನ ವರ್ಷಿಕ ತರಕಾರಿ ಅಗತ್ಯವನ್ನು ಪೂರೈಸುತ್ತದೆ, ಪೂರ್ಣ ಸಾವಯವ ತರಕಾರಿ ಕರುಣಾಗೃಹದ ಮಕ್ಕಳ ಆರೋಗ್ಯವನ್ನು ಕಾಪಾಡುತ್ತಾಬಂದಿದೆ.

ಪೂರ್ವ ಮತ್ತು ಪಶ್ಚಿಮ ದಿಕ್ಕುಗಳತ್ತ ಮುಖಮಾಡಿರುವ ಜನಪದ ನಿಲಯಕ್ಕೆ ಒಂದು ವಿಶಿಷ್ಟತೆ ಬಂದಿದೆ. ನಿಲಯದಲ್ಲಿ ವಾಸವಾಗಿರುವವರ ಮನಸ್ಸನ್ನು ಪ್ರಫುಲ್ಲವಾಗಿಟ್ಟಿವೆ. ಮೇಲುಕೋಟೆಯಲ್ಲಿ ಜನಿಸಿದ ಕನ್ನಡದ ವರಕವಿ ಪು.ತಿ.ನ ತಮ್ಮ ಯದುಗಿರಿ ಕವನದಲ್ಲಿ ಹಾಡಿದ ಕೆಳಗಿನ ಸಾಲುಗಳು ನಿತ್ಯ ಅನುಭವಕ್ಕೆ ಬರುತ್ತವೆ.

> "ರವಿ ಮುಳುಗಲು, ಹೊನ್ನಿಲಿಯ ಸಂಜೆಯ ಹೊಗರ್ ತೋರೆ
> ಸುಖ ಸ್ಪರ್ಶದ ಗಿರಿ ಮಾರುತ ಉಲ್ಲಾಸವನು ಬೀರೆ,
> ಖಗ ಸಂಕುಲ ಹಾರುತ್ತಿರೆ, ಕರಿ ಮೋಡದ ತೇರು
> ಚೆಲುವುಕ್ಕಿದೆ, ಮುದ ಮೂಡಿದೆ ಯಾದವಗಿರಿ ನಭದಿ".

(ಮುಂದುವರಿಯುವುದು...)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ ಈ.ಧನಂಜಯ, ಮೈಸೂರು
ಶ್ರೀ ಎನ್.ಎಸ್.ರಘುನಾಥ್, ಮೈಸೂರು
ಶ್ರೀ ಡಿ.ಎಸ್.ನಾಗಭೂಷಣ್, ಶಿವಮೊಗ್ಗ
ಶ್ರೀ ಆರೂರು ಮಂಜುನಾಥರಾವ್, ಉಡುಪಿ
ಶ್ರೀ ಎಲ್.ಎನ್.ಶಾಸ್ತ್ರಿ, ಮೈಸೂರು
ಶ್ರೀ ಎಸ್.ಕೆ.ಹರಿಹರೇಶ್ವರ, ಮೈಸೂರು
ಡಾ. ಬಿ.ಎಸ್.ಎನ್.ಪ್ರಸಾದ್, ಮೈಸೂರು
ಶ್ರೀ ವಿ.ಜಿ.ಜೋಶಿ, ಬೆಂಗಳೂರು

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ ಮಾನ್ಯ

ಶ್ರೀಮತಿ, ಮೇಲುಕೋಟೆ
ಶ್ರೀ ವಿ.ಗಣೇಶ್, ಮೈಸೂರು
ಶ್ರೀ ಸುರೇಶ್ ಎನ್. ಋಗ್ವೇದಿ, ಚಾಮರಾಜನಗರ
ಶ್ರೀ ಅಶೋಕ್, ಹುಕ್ಕೇರಿ
ಶ್ರೀ ಈಶ್ವರಭಟ್, ಜೈಪುರ
ಶ್ರೀ ಎಂ.ವಿ.ಪಡಿಗಾರ್, ಹುಬ್ಬಳ್ಳಿ
ಶ್ರೀ ವೈ.ಕೆ.ಮೂರ್ತಿ, ಉಡುಪಿ
ಶ್ರೀ ಕೆ.ಎಸ್.ರಾವ್, ಗುರಗಾಂವ್
ಶ್ರೀ ವಿ.ಸಿ.ಪರ್ವತಗೌಡ್ರ, ಹುಬ್ಬಳ್ಳಿ
ಶ್ರೀಮತಿ ವೀಣಾ ಬನ್ನಂಜೆ, ಬೆಂಗಳೂರು
ಇವರಿಗೆ ಕೃತಜ್ಞತೆಗಳು.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

KA / SK / MND / 470 / 2006-2008
Regd. no. KAR / KAN / 2000 / 3820

ತೆರೆದ-ಅಂಚೆ

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.Phone : 08236 – 299854, 316344
e-mail : janapada@yahoo.com Printed at Sanketh Mudrana, Melkote.